# ಎರಡನೇ
# ವಾರ್ಷಿಕ ವರದಿ ೨೦೦೬-೦೭

ಗೇಟ್ ಸಂಖ್ಯೆ.2, 3ನೇ ಮಹಡಿ,
ಬಹುಮಹಡಿಕಟ್ಟಡ,
ಡಾ.ಅಂಬೇಡ್ಕರ್ ವೀಧಿ,
ಬೆಂಗಳೂರು- 560001

# ಕಾರ್ಯ ಸಂಬಂಧಿ ನಕ್ಷೆ


ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
ರಾಜ್ಯ ಮಾಹಿತಿ ಆಯುಕ್ತರುಗಳು
ಕಾರ್ಯದರ್ಶಿ
ಆಪ್ತ ಸಹಾಯಕರು
ಸಹಾಯಕರು/ ಕಿರಿಯ ಸಹಾಯಕರು
ವಾಹನ ಚಾಲಕರು
ದಲಾಯತ್
ಆಪ್ತ ಕಾರ್ಯದರ್ಶಿ
ಆಪ್ತ ಸಹಾಯಕರು
ಸಹಾಯಕರು
ವಾಹನ ಚಾಲಕರು
ಜವಾನ
ಲೆಕ್ಕಪತ್ರಗಳು ಮತ್ತು ಆಡಳಿತ ಘಟಕ
ಅಧೀನ ಕಾರ್ಯದರ್ಶಿ
ನ್ಯಾಯಾಲಯ ಘಟಕ
ಶಾಖಾಧಿಕಾರಿ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ
ನ್ಯಾಯಿಕ ಘಟಕ
ಸ್ವೀಕೃತಿಗಳು, ರವಾನೆಗಳು ಮತ್ತು ದಾಖಲಾತಿ ಘಟಕ
ಆಪ್ತ ಸಹಾಯಕರು
ಸಹಾಯಕರು/ಕಿರಿಯ ಸಹಾಯಕರು
ವಾಹನ ಚಾಲಕರು
ದಲಾಯತ್

# ಆಡಳಿತ ವ್ಯವಸ್ಥೆ ನಕ್ಷೆ



# ಕಾರ್ಯಗತಿ ನಕ್ಷೆ


ಸ್ವೀಕೃತಿಗಳು
ಅಪೀಲುಗಳು ಮತ್ತು ದೂರುಗಳು
ಆರ್‌ಐಆರ್ ಘಟಕ
ವಿಚಾರಣೆಗಾಗಿ ಕಡತಗಳು
ನ್ಯಾಯಾಲಯ ಘಟಕ
ನ್ಯಾಯಾಲಯ ಘಟಕ
ರಾಜ್ಯ ಮುಖ್ಯ ಮಾಹಿತಿ ಆಯುಕ್ತರು / ರಾಜ್ಯ ಮಾಹಿತಿ ಆಯುಕ್ತರು
ವಿಷಯಸಂಬಂಧಿ ಪತ್ರ ವ್ಯವಹಾರ
ನ್ಯಾಯಿಕ ಘಟಕ
ನ್ಯಾಯಾಲಯ ಘಟಕ
ಮಾಹಿತಿಗಾಗಿ ಕೋರಿಕೆಗಳು
ಸಾರ್ವಜನಿಕ ಮಾಹಿತಿ ಅಧಿಕಾರಿ
ಇತರ ಟಪಾಲುಗಳು
ಅಧೀನ ಕಾರ್ಯದರ್ಶಿ
ಕಾರ್ಯದರ್ಶಿ
ರಾಜ್ಯ ಮಾಹಿತಿ ಆಯುಕ್ತರು
ರಾಜ್ಯ ಮುಖ್ಯ ಮಾಹಿತಿ ಆಯುಕ್ತರುಗಳು

# ಪರಿವಿಡಿ


| ಅಧ್ಯಾಯ | ವಿವರಗಳು | ಪುಟ ಸಂಖ್ಯೆ |
|---|---|---|
| 1 | **ಪೀಠಿಕೆ** | 1 – 7 |
| 2 | 2005-06 ಮತ್ತು 2006-07ನೇ ವರ್ಷಾವಧಿಗಳಲ್ಲಿ ನಡೆದ ಮಾಹಿತಿ ಹಕ್ಕಿಗೆ ಸಂಬಂಧಿಸಿದ ಕೆಲವು ಪ್ರಮುಖ ಕಾರ್ಯಕ್ರಮಗಳು | 8 – 19 |
| 3 | ಆಯೋಗ ಹೊರಡಿಸಿದ ಕೆಲವು ಪ್ರಮುಖ ಆದೇಶಗಳ ಸಂಕ್ಷಿಪ್ತ ಪಟ್ಟಿ | 20 – 34 |
| 4 | ಸಾಂಖ್ಯಿಕ ವಿಶ್ಲೇಷಣೆ | 35 – 43 |
| 5 | ಶಿಫಾರಸುಗಳು | 44 – 50 |

**ಅನುಬಂಧಗಳು**

| | | |
|---|---|---|
| ಎ. | ಕೋಷ್ಟಕಗಳು ಮತ್ತು ನಕ್ಷೆಗಳು | 51 – 69 |
| ಬಿ. | ನಿಯಮಗಳು ಮತ್ತು ಸರ್ಕಾರಿ ಆದೇಶಗಳು | 70 – 73 |

**ಅನುಬಂಧ –"ಬಿ"**

| | | |
|---|---|---|
| ಎ. | ಮಾಹಿತಿ ಹಕ್ಕು ನಿಯಮಗಳು ಮತ್ತು ಕೆಲವು ಪ್ರಮುಖ ಸರ್ಕಾರಿ ಆದೇಶಗಳು | 74 – 84 |

# ಅಧ್ಯಾಯ – I

## ಪೀಠಿಕೆ:

1.1 ಮಾಹಿತಿ ಹಕ್ಕು ಅಧಿನಿಯಮ, 2005ರ ಎಲ್ಲಾ ಉಪಬಂಧಗಳು 25.10.2005 ರಂದು ಜಾರಿಯಲ್ಲಿ ಬಂದಿವೆ. ಆದ್ದರಿಂದ 2006–07ನೇ ವರ್ಷವು, ಅಧಿನಿಯಮದ ಕಾರ್ಯಾಚರಣೆಯ ಎರಡನೇ ವರ್ಷವಾಗಿದೆ.

1.2 ಈ ಅಧಿನಿಯಮವನ್ನು ಸಮಾಜದ ಎಲ್ಲಾ ವರ್ಗಗಳೂ ಸ್ವಾಗತಿಸಿವೆ. 19.8.2006ರಂದು ಚೆನ್ನೈನಲ್ಲಿ ನೀಡಿದ ಉಪನ್ಯಾಸದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ನ್ಯಾಯಮೂರ್ತಿ ಡಾ. ಎ.ಆರ್. ಲಕ್ಷ್ಮಣರಾವ್, ಅವರು ಈ ಮುಂದಿನಂತೆ ಮಾಹಿತಿ ಹಕ್ಕಿನ ಚರಿತ್ರೆಯನ್ನು ವಿಶದಪಡಿಸಿದರು:

“ ವಿಶ್ವಸಂಸ್ಥೆಯು 1948ರ ಮಾರ್ಚ್‌ನಲ್ಲಿ ಮಾಹಿತಿ ಸ್ವಾತಂತ್ರ್ಯದ ವಸ್ತು ವಿಷಯ ಕುರಿತು ಜಿನೀವಾದಲ್ಲಿ ಸಮ್ಮೇಳನವನ್ನು ಆಯೋಜಿಸಿದ್ದಾಗ ಈ ಹಕ್ಕು ಉದ್ಭವಿಸಿದ್ದು, ಈ ಸಮಾವೇಶದಲ್ಲಿ ಒಟ್ಟು 54 ರಾಷ್ಟ್ರಗಳು ಭಾಗವಹಿಸಿದ್ದವು. ಅಂತಿಮವಾಗಿ ಇದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಾಹಿತಿ ಸ್ವಾತಂತ್ರ್ಯವನ್ನು ಮೂಲಭೂತ ಮಾನವ ಹಕ್ಕು ಎಂದು ಘೋಷಿಸಲು ಕಾರಣವಾಯಿತು ಮತ್ತು 10.12.1948ರಂದು ಆ ರೀತಿ ಘೋಷಣೆ ಮಾಡಲಾಯಿತು. 1960ರಲ್ಲಿ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಪರಿಷತ್ತು ಮಾಹಿತಿ ಸ್ವಾತಂತ್ರ್ಯದ ಘೋಷಣೆ ಅಳವಡಿಸಿಕೊಂಡಿತು. ಸ್ವೀಡನ್ ತನ್ನ ದೇಶದ ನಾಗರಿಕರಿಗೆ ಅಧಿಕೃತ ಮಾಹಿತಿಯನ್ನು ಪಡೆಯುವುದಕ್ಕಾಗಿ ಉಪಬಂಧ ರಚಿಸಿದ ವಿಶ್ವದ ಪ್ರಥಮ ರಾಷ್ಟ್ರವಾಗಿದೆ. ಆನಂತರ ಅನೇಕ ರಾಷ್ಟ್ರಗಳು ಈ ತತ್ವವನ್ನು ಅಳವಡಿಸಿಕೊಂಡು, ಅದನ್ನು ಒಳಗೊಂಡಿರುವ ಕಾನೂನುಗಳನ್ನೂ ರಚಿಸಿದರು. ಪ್ರತಿಯೊಬ್ಬ ವ್ಯಕ್ತಿಯೂ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿ ಪಡೆಯುವುದಕ್ಕೆ ಸಮರ್ಪಕವಾದ ವ್ಯವಸ್ಥೆ ಹೊಂದಿರತಕ್ಕದ್ದು. ಸಮಸ್ಯೆಗಳ ನಿವಾರಣೆ ಮತ್ತು ನ್ಯಾಯಿಕ ಮತ್ತು ಆಡಳಿತ ವ್ಯವಹರಣೆಗಳ ಬಗ್ಗೆ ಕೂಡ ಪರಿಣಾಮಕಾರಿಯಾಗಿ ಮಾಹಿತಿ ಪಡೆಯುವ ವ್ಯವಸ್ಥೆ ಒದಗಿಸತಕ್ಕದ್ದು. ಮಾಹಿತಿ ಹಕ್ಕು ಅಧಿನಿಯಮ, 2005 ಅಂಥ ಮೂಲಭೂತ ಹಕ್ಕುಗಳನ್ನು ಮಾನ್ಯ ಮಾಡಿರುವ ಅಧಿನಿಯಮವಾಗಿದ್ದು, ಜನರು ನಮ್ಮ ಪ್ರಜಾಪ್ರಭುತ್ವದ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಾಧ್ಯಗೊಳಿಸಿರುತ್ತದೆ.

1.3 ಸುರುಪ್ ಸಿಂಗ್ – ವಿರುದ್ಧ – ಮಹಾರಾಷ್ಟ್ರ ರಾಜ್ಯ ಮೊಕದ್ದಮೆಯಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ಈ ಮುಂದಿನಂತೆ ತೀರ್ಪು ನೀಡಿರುತ್ತದೆ:

“ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಈ ಅಧಿನಿಯಮವು ಸಾರ್ವಜನಿಕ ಪ್ರಾಧಿಕಾರಿಗಳ ಅಧೀನದಲ್ಲಿರುವ ಮಾಹಿತಿಯನ್ನು ಪಡೆದುಕೊಳ್ಳಲು ಮತ್ತು ಪ್ರತಿಯೊಬ್ಬ ಸಾರ್ವಜನಿಕ ಪ್ರಾಧಿಕಾರಿಯ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು

ಉತ್ತೇಜಿಸುವುದಕ್ಕೂ ಸಹ ನಾಗರಿಕರಿಗೆ ಮಾಹಿತಿ ಹಕ್ಕಿನ ವಾಸ್ತವಿಕ ವಿಧಾನವೊಂದನ್ನು ರೂಪಿಸುವುದಕ್ಕೆ ಅವಕಾಶ ಕಲ್ಪಿಸುತ್ತದೆ. ವಿಧಾನಮಂಡಲದ ಈ ಉದ್ದೇಶಗಳು ನಮ್ಮ ಸಮಾಜವನ್ನು ಇನ್ನಷ್ಟು ಮುಕ್ತವಾಗಿಸುತ್ತವಲ್ಲದೆ ಸಾರ್ವಜನಿಕ ಪ್ರಾಧಿಕಾರಿಗಳು ಇನ್ನಷ್ಟು ಹೊಣೆಗಾರಿಕೆಯಿಂದ ಕೆಲಸ ಮಾಡುವಂತೆ ಮಾಡುತ್ತವೆ.

ಈ ಮಾಹಿತಿ ಹಕ್ಕಿನ ಉದ್ದೇಶಗಳ ಪೈಕಿ ಅದಕ್ಷ ಆಡಳಿತ ಮತ್ತು ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದೂ ಒಂದು ಉದ್ದೇಶವಾಗಿದೆ. ಭ್ರಷ್ಟಾಚಾರವನ್ನು ಈಗ ಮಾನವಹಕ್ಕುಗಳ ಉಲ್ಲಂಘನೆಯೆಂದು ಪರಿಗಣಿಸಲಾಗಿದೆ. ಉತ್ತಮ ಆಡಳಿತಕ್ಕೆ ಉತ್ತಮ ಪಾರದರ್ಶಕ ಪದ್ಧತಿಗಳು ಅತ್ಯವಶ್ಯಕವಾಗಿರುತ್ತದೆ ಮತ್ತು ಇದು ಗರಿಷ್ಠ ಪ್ರಮಾಣದಲ್ಲಿ ಮಾಹಿತಿಗಳನ್ನು ಬಹಿರಂಗಪಡಿಸುವುದು; ಪ್ರಕಟಿಸುವ ಹೊಣೆಗಾರಿಕೆ, ಮುಕ್ತ ಸರ್ಕಾರಕ್ಕೆ ಉತ್ತೇಜನ; ಅತ್ಯಂತ ಕಡಿಮೆ ವ್ಯಾಪ್ತಿಯ ಅಪವಾದಗಳು; ಕನಿಷ್ಠ ಪ್ರಮಾಣದ ವೆಚ್ಚಗಳು; ಮಾಹಿತಿ ಪಡೆಯಲು ಅನುಕೂಲಕರವಾದ ಪ್ರಕ್ರಿಯೆ; ಬಹಿರಂಗ ಸಭೆಗಳು; ಬಹಿರಂಗಪಡಿಸುವುದಕ್ಕೆ ಆದ್ಯತೆ ಮತ್ತು ಭ್ರಷ್ಟಾಚಾರದ ವಿರುದ್ಧ ನಿರ್ಭೀತಿಯಿಂದ ಮಾಹಿತಿ ನೀಡುವ ಮಾಹಿತಿದಾರರಿಗೆ ರಕ್ಷಣೆ ನೀಡುವುದನ್ನು ಒಳಗೊಳ್ಳುತ್ತದೆ.

ಸರ್ಕಾರ ಎಲ್ಲಾ ಹಂತಗಳಲ್ಲಿ ನಾಗರಿಕರಿಗೆ ಸಾರ್ವಜನಿಕ ಮಾಹಿತಿ ಒದಗಿಸುವುದಕ್ಕೆ ಗುಣಮಟ್ಟವನ್ನು ಖಚಿತಪಡಿಸುವುದನ್ನು ನೋಡಿಕೊಳ್ಳುವ ತನ್ನ ಪ್ರಯತ್ನಗಳಲ್ಲಿ ನಾಗರಿಕ ಸಮಾಜ ಯಾವುದೇ ದಯೆ ತೋರಿಸತಕ್ಕದ್ದಲ್ಲ. ಕೆಲವೊಮ್ಮೆ ನಿರುಪದ್ರವಿಯಾದ ಮಾಹಿತಿಯನ್ನು ಸಹ ನಿಡುವುದಿಲ್ಲ. ಕೆಲವೊಮ್ಮೆ ಸಾಮಾನ್ಯ ಅಂಕಿಅಂಶ ಮಾಹಿತಿ, ತೆರಿಗೆ ಪಾವತಿಸುವ ಯಾರೇ ಹಿತಾಸಕ್ತಿ ಹೊಂದಿರುವ ನಾಗರಿಕನು ತಿಳಿದುಕೊಳ್ಳುವ ಹಕ್ಕು ಹೊಂದಿರುವ ಅಂಕಿಅಂಶ ಮಾಹಿತಿಯು ಮಾನವ ಹಕ್ಕಾಗಿದ್ದು, ಸಾರ್ವಜನಿಕ ಹಿತಾಸಕ್ತಿಗೆ ಭಂಗವುಂಟುಮಾಡದಿರುವಂಥ ರಾಷ್ಟ್ರದ ರಹಸ್ಯಗಳನ್ನು ಕೋರಿದರೂ ಸಹ ಅವುಗಳನ್ನು ಒದಗಿಸುವುದಿಲ್ಲ.

ಮಾಹಿತಿ ಪಡೆಯುವುದು, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯುಳ್ಳದ್ದಾಗಿದೆ. ದಿನನಿತ್ಯದ ಜೀವನಕ್ಕೆ ಭಂಗ ತರುವಂಥ ಪ್ರಕ್ರಿಯೆಯಲ್ಲಿ ಸಾಮಾನ್ಯ ವ್ಯಕ್ತಿ ಭಾಗವಹಿಸಲು ಸಾಧ್ಯವಾಗದಂತೆ ಮಾಡುವುದು ಮತ್ತು ನೀತಿ ನಿರೂಪಣೆ ಮತ್ತು ಶಾಸನಾತ್ಮಕ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾದ ಪಾತ್ರ ನಿರ್ವಹಿಸುವುದಕ್ಕಾಗಿ ಆತನನ್ನು ಮಾಹಿತಿ ಸಹಿತ ಸಬಲಗೊಳಿಸುವುದು ಬಹಳ ಅತ್ಯಗತ್ಯವಾದುದು. ವ್ಯಾಪಕವಾದ ರಾಜಕೀಯ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಸರ್ಕಾರದಲ್ಲಿ ಉತ್ತರದಾಯತ್ವ ಮತ್ತು ಪಾರದರ್ಶಕತೆ ಇರಬೇಕು; ರಾಜಕೀಯ ಅಪರಾಧೀಕರಣವನ್ನು ತಪ್ಪಿಸುವುದಕ್ಕಾಗಿ ಮಾಹಿತಿಯು ಮುಕ್ತವಾಗಿ ಪ್ರವಹನವಾಗುವಂತಿರಬೇಕು.

ಈ ಅಧಿನಿಯಮವನ್ನು ಜಾರಿಗೊಳಿಸಲು ಇದ್ದ ಕಾರಣಗಳು ಇವು, ಸರ್ಕಾರ ಮಾಹಿತಿ ಪಡೆಯುವುದಕ್ಕೆ ಒದಗಿಸುತ್ತಿರುವ ವಿಧಾನದಲ್ಲಿರುವ ಜಿಗುಟುತನದ ಧೋರಣೆಯನ್ನು ಬದಲಾಯಿಸಿಕೊಳ್ಳುವ ಇಚ್ಛಾಶಕ್ತಿ ಹೊಂದಬೇಕು. ಆರೋಗ್ಯವಂತ ಪ್ರಜಾಪ್ರಭುತ್ವ ಮತ್ತು ಸಧೃಢ ಆರ್ಥಿಕ ನೀತಿಗೆ ಪಾರದರ್ಶಕತೆ ಬಹಳ ಅತ್ಯಗತ್ಯ. ... ... ..."

1.4 ಆದರೆ ಸಾಮಾನ್ಯ ಮನಷ್ಯನಿಗೆ ಮಾಹಿತಿ ಹಕ್ಕು ಅಧಿನಿಯಮವು, ಪಡಿತರಚೀಟಿಯನ್ನು ಪಡೆದುಕೊಳ್ಳುವುದು, ಭೂದಾಖಲೆಗಳನ್ನು ಪಡೆದುಕೊಳ್ಳುವುದು, ಸರ್ಕಾರಿ ದಾಖಲೆಗಳಲ್ಲಿ ಮಾಲೀಕತ್ವದ ಬದಲಾವಣೆಗಳನ್ನು ತ್ವರಿತವಾಗಿ ಮಾಡಿಸಿಕೊಳ್ಳುವುದು, ಪೌರಾಡಳಿತ ಸಂಸ್ಥೆಗಳಿಂದ ಅನುಮೋದಿತ ನಕ್ಷೆಗಳನ್ನು ಪಡೆದುಕೊಳ್ಳುವುದು, ಅನುಮೋದಿತ ನಕ್ಷೆಗಳು ಮತ್ತು ಕಟ್ಟಡ ನಿರ್ಮಾಣದ ಉಪನಿಯಮಗಳನ್ನು ಉಲ್ಲಂಘನೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದು, ಸೇವಾ ದಾಖಲೆಗಳ ಪ್ರತಿಗಳನ್ನು ಪಡೆದುಕೊಳ್ಳುವುದು. ಬಡ್ತಿಗಳು ಮತ್ತು ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಕೋರುವುದು ಮುಂತಾದ ಸರ್ಕಾರದಿಂದ ತನ್ನ ಕೆಲಸ ಮಾಡಿಕೊಳ್ಳುವುದಕ್ಕೆ ಒಂದು ಸಾಧನವಾಗಿದೆ.

1.5 ಆಯೋಗಕ್ಕೆ ಸಲ್ಲಿಸಿರುವ ಬಹುಪಾಲು ದೂರುಗಳು ಮತ್ತು ಅಪೀಲುಗಳು ಸಹ ಈ ವಿಷಯಗಳಿಗೆ ಮತ್ತು ಇದೇ ಬಗೆಯ ವಿಷಯಗಳಿಗೆ ಸಂಬಂಧಿಸಿರುತ್ತವೆ.

1.6 ಆಯೋಗ ಈ ರೀತಿಯ ಉಪಯೋಗವನ್ನು ಕಾನೂನುಬದ್ಧವೆಂದು ಪರಿಗಣಿಸಿದೆ. ಆದರೆ ಅಂಥ ಅಗಾಧ ಪ್ರಮಾಣದ ಕೋರಿಕೆಗಳ ರಾಶಿಯು ಅದರಲ್ಲೂ ಕೆಲವೊಮ್ಮೆ ಬಹಳ ಹಿಂದಿನ ಕಾಲಕ್ಕೆ ಸಂಬಂಧಪಟ್ಟವುಗಳು ಸಾರ್ವಜನಿಕ ಪ್ರಾಧಿಕಾರಿಗಳ ಆತ್ಮಸ್ಥೈರ್ಯ ಕುಂದಿಸುತ್ತವೆ.

1.7 ಅಧಿನಿಯಮದ 4 (i) (ಬಿ) (iii) ಮತ್ತು (iv) ನೇ ಪ್ರಕರಣಗಳು, ಸಾರ್ವಜನಿಕ ಪ್ರಾಧಿಕಾರಿಗಳು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಿದ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿ ಮತ್ತು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ತಾವು ಅಳವಡಿಸಿಕೊಂಡ ಮಾನದಂಡಗಳನ್ನು ಪ್ರಕಟಿಸುವಂತೆ ಅಗತ್ಯಪಡಿಸುತ್ತವೆ. ಅಲ್ಲದೆ 19(8)(ಎ) ಪ್ರಕರಣದ ಮೇರೆಗೆ ಆಯೋಗ, ಅಧಿನಿಯಮದ ಉಪಬಂಧಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದಕ್ಕೆ ಅಗತ್ಯವೆನಿಸಬಹುದಾದ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಾರ್ವಜನಿಕ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡುವ ಹಕ್ಕು ಹೊಂದಿರುತ್ತವೆ.

1.8 ಆಯೋಗವು ಸ್ವೀಕರಿಸಿರುವ ಬಹಳಷ್ಟು ಸಂಖ್ಯೆಯ ದೂರುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬೃಬೆಂಮಪಾ)ಗೆ ಸಂಬಂಧಿಸಿರುತ್ತವೆಂಬುದನ್ನು ಗಮನಿಸಿದೆ. ಆದ್ದರಿಂದ ಆಯೋಗ, ಬೃಬೆಂಮಪಾ.ಗೆ, ಮಾಹಿತಿಹಕ್ಕು ಅಧಿನಿಯಮದ ಮೇರೆಗೆ ಅದಕ್ಕೆ ಸಲ್ಲಿಸುವ

ಕೋರಿಕೆಗಳನ್ನು ಪರಿಶೀಲಿಸಿ ಅವುಗಳಿಗೆ ಉತ್ತರಿಸುವುದಕ್ಕಾಗಿ ಪ್ರತ್ಯೇಕವಾದ ಮಾಹಿತಿಹಕ್ಕು ವಿಭಾಗವನ್ನು ಸ್ಥಾಪಿಸುವಂತೆ ನಿರ್ದೇಶನ ನೀಡಿದೆ.

1.9 ಆಯೋಗವು, ಮಂಜೂರಾದ ನಕ್ಷೆಗಳು ಮತ್ತು ಕಟ್ಟಡ ನಿರ್ಮಾಣದ ಉಪನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಸಂಬಂಧಿಸಿದ ದೂರುಗಳನ್ನು ಕುರಿತು ವ್ಯವಹರಿಸುವುದಕ್ಕಾಗಿ "ಪ್ರಮಾಣಿತ ಕಾರ್ಯವಿಧಾನ"ವೊಂದನ್ನು ರೂಪಿಸುವಂತೆ ಸಹ ಬೃಬೆಂಮಪಾ.ಗೆ ನಿರ್ದೇಶನ ನೀಡಿದೆ.

1.10 ಬೃಬೆಂಮಪಾ.ಯು, ಈ ನಿರ್ದೇಶನಗಳನ್ನು ಪಾಲಿಸಿ ರೂಪಿಸಿದ ಉತ್ತಮ ಕಾರ್ಯವಿಧಾನವು, ಮಂಜೂರಾದ ನಕ್ಷೆಗಳು ಮತ್ತು ಕಟ್ಟಡ ನಿರ್ಮಾಣಗಳ ಉಪ-ಕಾನೂನುಗಳ ಉಲ್ಲಂಘನೆಯನ್ನು ಒಳಗೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ನಾಗರಿಕರು ಮತ್ತು ಅಧಿಕಾರಿಗಳು ತಮ್ಮ ಹಕ್ಕುಗಳನ್ನು, ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ನೆರವಾಗಿರುತ್ತದೆಂದು ತಿಳಿಸಲು ಆಯೋಗವು ಹರ್ಷಿಸುತ್ತದೆ.

1.11 ಮೇಲಿನ ಅನುಭವದಿಂದ, ಸಾರ್ವಜನಿಕ ಪ್ರಾಧಿಕಾರಿಗಳ ಕಾರ್ಯನಿರ್ವಹಣೆಯನ್ನು ದಕ್ಷಗೊಳಿಸಲು ಮತ್ತು ಸರ್ಕಾರದಿಂದ ಅಗತ್ಯ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ನಾಗರೀಕರಿಗೆ ನೆರವಾಗಲು 4(i)(ಬಿ)(iii) ಮತ್ತು (iv)ನೇ ಪ್ರಕರಣಗಳಿಗೆ ಅಪಾರ ಅಧಿಕಾರ ನೀಡಲಾಗಿದೆ ಎಂಬುದು ಆಯೋಗದ ಅಭಿಪ್ರಾಯವಾಗಿದೆ.

1.12 ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು ಮೊಟ್ಟಮೊದಲು, ಅವು ನಾಗರೀಕರಿಗೆ ಒದಗಿಸುವ ಸೇವೆಗಳ ಪಟ್ಟಿಯನ್ನು ತಯಾರಿಸಬೇಕೆಂಬುದು ಆಯೋಗದ ಅಭಿಮತವಾಗಿದೆ. ಆನಂತರ ಅವು, ಅಂಥ ಸೇವೆಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ಕೋರಿಕೆಗಳನ್ನು ನಿರ್ವಹಿಸುವುದಕ್ಕಾಗಿ ಅಳವಡಿಸಿಕೊಂಡ "ಪ್ರಮಾಣಿತ ಕಾರ್ಯವಿಧಾನ"ವನ್ನು ದಾಖಲಿಸಬೇಕು. ಅವು ಅಂಥ ಸೇವೆಗಳನ್ನು ಒದಗಿಸುವುದಕ್ಕಾಗಿ ರೂಪಿಸಿರುವ ಮಾನದಂಡಗಳನ್ನು ಸಹ ಉದಾಹರಣೆಗೆ: "ಮೊದಲು ಬಂದವರಿಗೆ ಮೊದಲು ಸೇವೆ" ಉತ್ತರದ ನಿರೀಕ್ಷಣಾ ಅವಧಿ ಮೊದಲಾದವುಗಳನ್ನು ಸಹ ಸೂಚಿಸತಕ್ಕದ್ದು.

1.13 ಆಯೋಗವು, ಇದು ಹೊಸ ಕಲ್ಪನೆಯೇನೂ ಅಲ್ಲವೆಂಬುದನ್ನು ಗಮನಿಸಿದೆ. "ನಾಗರೀಕ ಸನ್ನದು" ಪರಿಕಲ್ಪನೆ ಸಹ ಬಹುಮಟ್ಟಿಗೆ ಇದೇ ರೀತಿಯದು. ಸರ್ಕಾರದಲ್ಲಿ ಅಂಥ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಕ್ಕೆ ಉತ್ತಮ ಉದಾಹರಣೆಯೆಂದರೆ ಪಾಸ್‌ಪೋರ್ಟ್‌ಗಳನ್ನು ನೀಡುವುದು. ಇದರಲ್ಲಿ ಅರ್ಜಿ ಅಂಗೀಕಾರ ಪ್ರಾಧಿಕಾರಿಯು, ಅರ್ಜಿಯನ್ನು ಅಂಗೀಕರಿಸುವುದಕ್ಕೆ ಮುಂಚೆ ಅದನ್ನು ಪರಿಶೀಲಿಸುತ್ತಾರೆ ಮತ್ತು ಪೋಲೀಸ್ ಪರಿಶೀಲನೆಗೆ ಒಳಪಟ್ಟು ನಿಗದಿತ ಕಾಲಾವಧಿಯೊಳಗೆ ಪಾಸ್‌ಪೋರ್ಟ್ ಸ್ವೀಕರಿಸಬಹುದೆಂಬುದಕ್ಕೆ ನಾಗರೀಕರಿಗೆ ಭರವಸೆ

ನೀಡುತ್ತಾರೆ. ತುಂಬಾ ತುರ್ತು ಸಂದರ್ಭಗಳಲ್ಲಿರುವವರಿಗೆ "ತತ್ಕಾಲ್" ಯೋಜನೆ ಪರಿಹಾರ ಒದಗಿಸುತ್ತದೆ ಮಾತ್ರವಲ್ಲ ಇದು ಇಲಾಖೆಗೆ ಹೆಚ್ಚಿನ ಆದಾಯ ತರಲು ಸಹ ನೆರವಾಗುತ್ತದೆ.

1.14 ಸೂಚಿತ ಕಾರ್ಯವಿಧಾನವು "(ಐಎಸ್‌ಓ)೨೦೦೦" ಪ್ರಮಾಣೀಕರಣಕ್ಕೆ ಸಮನಾದುದಾಗಿರುತ್ತದೆ. ಇದರಲ್ಲಿ ಅರ್ಜಿದಾರ ಸಂಸ್ಥೆಯು, ಅದರ ಪ್ರತಿಯೊಂದು ಕಾರ್ಯಚಟುವಟಿಕೆಗೆ ಸಂಬಂಧಿಸಿದಂತೆ ತಾನು ಅಳವಡಿಸಿಕೊಂಡಿರುವ ಕಾರ್ಯವಿಧಾನವನ್ನು ದಾಖಲಿಸಬೇಕು ಮತ್ತು ಅದನ್ನು ಉತ್ತಮ ಮತ್ತು ಪ್ರಮಾಣಿತ ಉತ್ಪನ್ನಗಳು/ಸೇವೆಗಳನ್ನು ಒದಗಿಸುವುದಕ್ಕಾಗಿ ಅನುಸರಣೆ ಮಾಡಬೇಕು.

1.15 ಈ ಸಂದರ್ಭದಲ್ಲಿ ಆಯೋಗವು, ಕರ್ನಾಟಕ ಸರ್ಕಾರದ ಇ–ಆಡಳಿತ ಇಲಾಖೆಯು ಕೈಗೊಂಡಿರುವ ಉಪಕ್ರಮವನ್ನು ಆಸಕ್ತಿಯಿಂದ ಗಮನಿಸಿದೆ. ಇದರಲ್ಲಿ ತಾಲ್ಲೂಕು ಕಚೇರಿಗಳು ಒದಗಿಸುವ 37ಕ್ಕಿಂತ ಹೆಚ್ಚು ಸೇವೆಗಳನ್ನು ಗುರುತಿಸಿ ಪ್ರಮಾಣಿತಗೊಳಿಸಲಾಗಿದೆ. ಇದಾದನಂತರ ಈ ಸೇವೆಗಳನ್ನು ಕಾಲಮಿತಿ ವಿಧಾನದಲ್ಲಿ ಹೋಬಳಿ ಮಟ್ಟದ ಗ್ರಾಮೀಣ ಡಿಜಿಟಲ್ ಕೇಂದ್ರಗಳ ಮುಖಾಂತರ–ಅರ್ಜಿದಾರ ಸರ್ಕಾರಿ ಇಲಾಖೆಗಳಿಗೆ ಭೇಟಿ ನೀಡದೆ ಒದಗಿಸಲು ಉದ್ದೇಶಿಸಲಾಗಿದೆ.

1.16 ಆಯೋಗವು, ಈ ಕ್ರಮವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿರುವ ಕಾರ್ಯನಿರ್ವಹಣೆಯೆಂಬುದಾಗಿ ಮೆಚ್ಚುಗೆ ವ್ಯಕ್ತಪಡಿಸಿರುತ್ತದೆ ಮತ್ತು ಇದನ್ನು ನಾಗರೀಕರಿಗೆ ಸೇವೆಯನ್ನು ಒದಗಿಸುವುದರಲ್ಲಿ ಉನ್ನತ ಮಟ್ಟದ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ತರುವುದಕ್ಕಾಗಿ ಇನ್ನಷ್ಟು ಹೆಚ್ಚು ಇಲಾಖೆಗಳಿಗೆ ಮತ್ತು ಸೇವೆಗಳಿಗೆ ವಿಸ್ತರಿಸತಕ್ಕದ್ದೆಂದು ಶಿಫಾರಸು ಮಾಡಿರುತ್ತದೆ.

# ಅಧ್ಯಾಯ – II

## 2005–06 ಮತ್ತು 2006–07ನೇ ಸಾಲಿನಲ್ಲಿ ನಡೆಸಲಾದ ಮಾಹಿತಿಹಕ್ಕಿಗೆ ಸಂಬಂಧಿಸಿದ ಕೆಲವು ಪ್ರಮುಖ ಕಾರ್ಯಕ್ರಮಗಳು

**ಎ. ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ 2005ರ ನವೆಂಬರ್ 17 ಮತ್ತು 18ರಂದು ಮಾಹಿತಿಹಕ್ಕು ಅಧಿನಿಯಮದ ಅನುಷ್ಠಾನದ ಬಗ್ಗೆ ತರಬೇತಿದಾರರಿಗೆ ತರಬೇತಿ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು**

2.1 ಆಡಳಿತ ತರಬೇತಿ ಸಂಸ್ಥೆ, ಮೈಸೂರು, ಇದರ ಮಹಾನಿರ್ದೇಶಕರು, 2005ರ ನವೆಂಬರ್ 17 ಮತ್ತು 18ರಂದು ಮಾಹಿತಿ ಹಕ್ಕು ಅಧಿನಿಯಮದ ಅನುಷ್ಠಾನದ ಬಗ್ಗೆ ತರಬೇತಿದಾರರಿಗೆ ತರಬೇತಿ ಕುರಿತು ಕಾರ್ಯಾಗಾರವನ್ನು ವ್ಯವಸ್ಥೆಗೊಳಿಸಿದ್ದರು. ಈ ಕಾರ್ಯಾಗಾರದಲ್ಲಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಜಿಲ್ಲಾಮಟ್ಟದ ಇಲಾಖಾ ಮುಖ್ಯಸ್ಥರು ಭಾಗವಹಿಸಿದ್ದರು.

2.2 ಈ ಕಾರ್ಯಾಗಾರವನ್ನು 17ನೇ ನವೆಂಬರ್ 2005ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಕೆ. ಮಿಶ್ರರವರು ಉದ್ಘಾಟಿಸಿದರು. ಶ್ರೀ ಮಿಶ್ರರವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ, 2000 (ಇದು ನಿರಸಿತವಾಗಿದೆ)ರ ಮತ್ತು ಮಾಹಿತಿ ಹಕ್ಕು ಅಧಿನಿಯಮ, 2005 ಇವುಗಳ ಉಪಬಂಧಗಳ ನಡುವೆ ಇರುವ ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಅವರು, ಹೊಸ ಕಾನೂನಿನ ಮೇರೆಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ಸಹ ವಿವರಿಸಿದರು.

2.3 ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರು ದಾಖಲೆಗಳ ವಿಷಯಸೂಚಿ ಮತ್ತು ಅಕಾರಾದಿ ಅನುಕ್ರಮಣಿಕೆಯನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ 4(1)(ಎ) ಪ್ರಕರಣದ ಮೇರೆಗೆ ಮತ್ತು ಪೂರ್ವನಿಯಾಮಕ ಬಹಿರಂಗಪಡಿಸುವಿಕೆಗಳ ಪ್ರಕಟಣೆಗೆ ಸಂಬಂಧಿಸಿದಂತೆ 4(1)(ಬಿ) ಪ್ರಕರಣದ ಮೇರೆಗೆ; ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಮಾಹಿತಿಗಾಗಿನ ಕೋರಿಕೆಗಳ ಸ್ವೀಕೃತಿ ಮತ್ತು ವಿಲೇ; ಅಧಿನಿಯಮದ ಮೇರೆಗೆ ಒದಗಿಸಿರುವ ವಿನಾಯತಿಗಳು ಮತ್ತು ತಪ್ಪಿತಸ್ಥ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿರುದ್ಧದ ದಂಡನೀಯ ಉಪಬಂಧಗಳ ಕುರಿತಂತೆ ಸಾರ್ವಜನಿಕ ಪ್ರಾಧಿಕಾರಗಳಿಗೆ ಇರುವ ಹೊಣೆಗಾರಿಕೆಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿದರು.

**ಬಿ. ಮಾಹಿತಿಹಕ್ಕು ಅಧಿನಿಯಮ, 2005ನ್ನು ಕನ್ನಡ ಭಾಷೆಗೆ ಅಧಿಕೃತವಾಗಿ ಭಾಷಾಂತರಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ 5–12–2005ರಂದು ಸರ್ಕಾರದ ಕಾರ್ಯದರ್ಶಿ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಇಲಾಖೆ, ಇವರೊಂದಿಗೆ ಸಭೆ ನಡೆಸಲಾಯಿತು**

2.4 ಕರ್ನಾಟಕ ಮಾಹಿತಿ ಆಯೋಗವು, ಮಾಹಿತಿಹಕ್ಕು ಅಧಿನಿಯಮ, 2005 ಇದನ್ನು ಕನ್ನಡಭಾಷೆಗೆ ಅಧಿಕೃತವಾಗಿ ಭಾಷಾಂತರಿಸುವುದಕ್ಕಾಗಿ ವ್ಯವಸ್ಥೆ ಮಾಡುವಂತೆ ಚರ್ಚಿಸಲು ದಿನಾಂಕ

5-12-2005ರಂದು ಶ್ರೀ ಬೋರೆಗೌಡ, ಸರ್ಕಾರದ ಕಾರ್ಯದರ್ಶಿ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಇಲಾಖೆ ಇವರೊಂದಿಗೆ ಜರುಗಿದ ಸಭೆಯಲ್ಲಿ ಚರ್ಚಿಸಲಾಯಿತು. ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಬೋರೇಗೌಡರು, ಭಾಷಾಂತರ ಇಲಾಖೆಯು ಮಾಡುವ ಅಧಿನಿಯಮದ ಕರಡು ಭಾಷಾಂತರವನ್ನು ಪರಿಶೀಲಿಸುವುದು ಮತ್ತು ಅಧಿನಿಯಮದ ಅನುಮೋದಿತ ಕನ್ನಡ ಭಾಷಾಂತರವನ್ನು ಅಧಿಕೃತ (ರಾಜಭಾಷಾ) ಸಮಿತಿಯ ಮುಂದೆ ಮಂಡಿಸುವುದು ಹಾಗೂ ಆನಂತರ ಭಾರತದ ರಾಷ್ಟ್ರಪತಿಯವರ ಸಮ್ಮತಿ ಪಡೆಯಲು ಅವರಿಗೆ ಸಲ್ಲಿಸುವುದಕ್ಕಾಗಿ ಗೃಹ ವ್ಯವಹಾರಗಳ ಮಂತ್ರಾಲಯಕ್ಕೆ ಸಲ್ಲಿಸುವುದಕ್ಕಾಗಿ ರಾಜಭಾಷಾ ಅಧಿನಿಯಮ, 1963ರ ಮೇರೆಗೆ ರಾಜಭಾಷಾ ಸಮಿತಿಯನ್ನು ನೇಮಕ ಮಾಡುವುದೂ ಸೇರಿದಂತೆ ಭಾಷಾಂತರ ಆವೃತ್ತಿಯನ್ನು ಹೊರತರುವುದರಲ್ಲಿ ಒಳಗೊಂಡಿರುವ ಸರ್ಕಾರೀ ಕಾರ್ಯವಿಧಾನವನ್ನು ವಿವರಿಸಿದರು.

2.5 ಭಾಷಾಂತರ ಇಲಾಖೆಯು ಈಗಾಗಲೇ ಮಾಹಿತಿಹಕ್ಕು ಅಧಿನಿಯಮ, 2005 ಇದನ್ನು ಕನ್ನಡಕ್ಕೆ ಭಾಷಾಂತರಿಸಿದ್ದು ಕರಡು ಭಾಷಾಂತರವು ಪರಿಶೀಲನೆ ಮತ್ತು ಅನುಮೋದನೆಗಾಗಿ ಭಾಷಾಂತರ ಸಮಿತಿಯ ಮುಂದೆ ಇರುವುದಾಗಿಯೂ ಸಹ ಅವರು ಹೇಳಿದರು. ಆಂಥ ಅನುಮೋದನೆ ನಂತರ ಅದಕ್ಕೆ ಭಾರತದ ರಾಷ್ಟ್ರಪತಿಯರ ಸಮ್ಮತಿ ಪಡೆಯುವುದೂ ಸೇರಿದಂತೆ ಅನುಮೋದನೆಗಾಗಿ ಭಾರತ ಸರ್ಕಾರದ ಗೃಹ ಮಂತ್ರಾಲಯಕ್ಕೆ ಪ್ರಸ್ತಾವ ಕಳುಹಿಸಲಾಗುವುದು.

**ಸಿ. 11 ಮತ್ತು 12ನೇ ಡಿಸೆಂಬರ್, 2005ರಂದು ನ್ಯಾಷನಲ್ ಜುಡಿಷಿಯಲ್ ಅಕಾಡೆಮಿ, ಭೋಪಾಲ್ ಇಲ್ಲಿ ಮಾಹಿತಿಹಕ್ಕು ಕುರಿತಂತೆ ರಾಷ್ಟ್ರೀಯ ವಿಚಾರಗೋಷ್ಠಿಯನ್ನು ನಡೆಸಲಾಯಿತು.**

2.6 ಸಾರ್ವಜನಿಕ ಆಡಳಿತ ವ್ಯವಸ್ಥೆಯನ್ನು ಉತ್ತಮಗೊಳಿಸುವುದಕ್ಕಾಗಿ ವಿವರವಾದ ನೀಲನಕ್ಷೆಯನ್ನು ಸಿದ್ಧಪಡಿಸಲು ಎರಡನೆ ಆಡಳಿತ ಸುಧಾರಣಾ ಆಯೋಗವನ್ನು ರಚಿಸಲಾಗಿದೆ. ಸದರಿ ಆಯೋಗವು, ಅದರ ಮೊದಲನೆ ವರದಿಯಲ್ಲಿ ಮಾಹಿತಿಹಕ್ಕು ಅಧಿನಿಯಮ ಮತ್ತು ಅದರ ಅನುಷ್ಠಾನದ ವಿಷಯ ಕುರಿತು ವ್ಯವಹರಿಸುವುದಾಗಿ ನಿರ್ಧರಿಸಿದೆ.

2.7 ಈ ನಿರ್ಣಯಕ್ಕನುಸಾರವಾಗಿ, ಆಡಳಿತ ಸುಧಾರಣಾ ಆಯೋಗವು, ವಿವಿಧ ಆಸಕ್ತಿದಾರರ ಅಭಿಪ್ರಾಯಗಳನ್ನು ಹೊರಡಿಸಲು 11 ಮತ್ತು 12ನೇ ಡಿಸೆಂಬರ್ 2005ರಂದು ನ್ಯಾಷನಲ್ ಜುಡಿಷಿಯಲ್ ಅಕಾಡೆಮಿ, ಭೋಪಾಲ್ ಇಲ್ಲಿ ಮಾಹಿತಿಹಕ್ಕು ಅಧಿನಿಯಮ, 2005 ಕುರಿತು ರಾಷ್ಟ್ರೀಯ ವಿಚಾರಗೋಷ್ಠಿಯನ್ನು ಏರ್ಪಡಿಸಿತ್ತು.

2.8 ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಲ್ಲದೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ನ್ಯಾಯಾಲಯದ ಹಾಲಿ ಮತ್ತು ನಿವೃತ್ತ ನ್ಯಾಯಾಧೀಶರು (ಸರ್ವೋಚ್ಚ

ನ್ಯಾಯಾಲಯದ ಅಂದಿನ ಮುಖ್ಯ ನ್ಯಾಯಮೂರ್ತಿಯವರು ಮತ್ತು ಮೂವರು ಮಾಜಿ ಮುಖ್ಯ ನ್ಯಾಯಮೂತಿಗಳೂ ಸೇರಿದಂತೆ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಸುಮಾರು 50 ನ್ಯಾಯಾಧೀಶರು) ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು. ಶ್ರೀ ವರ್ಕಲ ರಾಧಾಕೃಷ್ಣನ್, ಸಂಸತ್ ಸದಸ್ಯರು; ಕೇಂದ್ರ ಮುಖ್ಯ/ಮಾಹಿತಿ ಆಯುಕ್ತರು; ರಾಜ್ಯ ಮುಖ್ಯ/ಮಾಹಿತಿ ಆಯುಕ್ತರು; ಭಾರತೀಯ ರಿಸರ್ವ್ ಬ್ಯಾಂಕ್‌ನ ಡೆಪ್ಯೂಟಿ ಗವರ್ನರ್; ಕೆನರ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿನಿಯಮದ ಅನುಷ್ಠಾನಕ್ಕಾಗಿ ಹೊಣೆಗಾರರಾದ ಭಾರತ ಸರ್ಕಾರದ ಹಿರಿಯ ಸರ್ಕಾರೀ ಅಧಿಕಾರಿಗಳು ಈ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು.

2.9 ಈ ವಿಚಾರಗೋಷ್ಠಿಯನ್ನು 11ನೇ ಡಿಸೆಂಬರ್ 2005ರಂದು ಮಾನ್ಯ ಭಾರತದ ಮುಖ್ಯ ನ್ಯಾಯಮೂರ್ತಿಗಳಾದ ನ್ಯಾಯಮೂರ್ತಿ ಶ್ರೀ ವೈ.ಕೆ. ಸಬರ್‌ವಾಲ್ ಇವರು ಉದ್ಘಾಟಿಸಿದರು. ನ್ಯಾಯಮೂರ್ತಿಗಳಾದ ಶ್ರೀ ಸಬರ್‌ವಾಲ್‌ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಮಾಹಿತಿಹಕ್ಕು ಅಧಿನಿಯಮದಲ್ಲಿ ಸರ್ಕಾರದಿಂದ ಮಾಹಿತಿ ಪಡೆಯುವ ಕಾರ್ಯವಿಧಾನವನ್ನು ನಿರೂಪಿಸಿರುವುದರಿಂದ ಇದು ನಾಗರೀಕರ ಕೈಯಲ್ಲಿರುವ ಒಂದು ಪ್ರಬಲ ಅಸ್ತ್ರವಾಗಿದೆಯೆಂದು ಹೇಳಿದರು. ಸರ್ಕಾರ ಮುಕ್ತ ಮತ್ತು ಜವಾಬ್ದಾರಿತನದಿಂದ ಕೂಡಿರಬೇಕು ಮತ್ತು ಅದು ಪ್ರತಿನಿಧಿಸುವ ಜನರಿಂದ ಯಾವುದನ್ನೂ ಮುಚ್ಚಿಡಬಾರದು ಎಂದು ಅವರು ಹೇಳಿದರು. ನಮ್ಮ ರಾಷ್ಟ್ರದಂತಹ ಜವಾಬ್ದಾರಿಯುತ ಸರ್ಕಾರದಲ್ಲಿ, ಸಾರ್ವಜನಿಕ ರಂಗದ ಎಲ್ಲಾ ಏಜೆಂಟರು ತಮ್ಮ ಕಾರ್ಯನಿರ್ವಹಣೆಗೆ ಹೊಣೆಗಾರರಾಗಿರುವುದರಿಂದ, ಯಾವುದೇ ರಹಸ್ಯಗಳಿರಬಾರದು ಮತ್ತು ತಿಳಿದುಕೊಳ್ಳುವ ಹಕ್ಕು ಪರಿಪೂರ್ಣವಿಲ್ಲದಿದ್ದರೂ ರಹಸ್ಯ ಕಾಪಾಡುವಿಕೆ ಖಂಡಿತ, ಅಪೇಕ್ಷಣೀಯ ಎಂದು ಸಹ ಅವರು ಹೇಳಿದರು.

2.10 ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಶ್ರೀ ವೀರಪ್ಪ ಮೊಯಿಲಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಮಾಹಿತಿಹಕ್ಕು ಅಧಿನಿಯಮವು, ಆಡಳಿತ ದೃಷ್ಟಿಕೋನ ಮತ್ತು ರಹಸ್ಯತೆ ಹಾಗೂ ನಿಯಂತ್ರಣ ಸಂಸ್ಕೃತಿ, ವಸಾಹತುಶಾಹಿಯುಗ ಮನೋಭಾವದಲ್ಲಿ ಕ್ರಾಂತಿಕಾರಕ ಮಾರ್ಪಾಡು ಮಾಡುತ್ತದೆ ಮತ್ತು ಆಡಳಿತದಲ್ಲಿ ಮುಕ್ತತೆ, ಪಾರದರ್ಶಕತೆ ಮತ್ತು ಜವಾಬ್ದಾರಿತನದ ಹೊಸ ಯುಗವನ್ನು ತರುತ್ತದೆ ಎಂದು ಹೇಳಿದರು. ಮಾಹಿತಿ ಹಕ್ಕು ಅಧಿನಿಯಮವು ಸಾಮಾನ್ಯ ನಾಗರಿಕನು ಸಾರ್ವಜನಿಕ ಪ್ರಾಧಿಕಾರಗಳ ಪ್ರತ್ಯೇಕ ನಿಯಂತ್ರಣದಲ್ಲಿರುವಂಥ ಮಾಹಿತಿಯನ್ನು ಪಡೆಯಲು ಸರಳ ಹಾಗೂ ಅನಿರ್ಬಂಧಿತ ಅವಕಾಶವನ್ನು ಒದಗಿಸುತ್ತದೆ. ಇದು ಕೇವಲ ನಾಗರಿಕರನ್ನು ಮಾಹಿತಿ ಪಡೆಯುವುದಕ್ಕೆ ಸಶಕ್ತ ಹಾಗೂ ಸಮರ್ಥಗೊಳಿಸುವುದಷ್ಟೇ ಅಲ್ಲದೆ,

ನಿರ್ಣಯ ಕೈಗೊಳ್ಳುವ ಕಾರ್ಯವಿಧಾನದಲ್ಲಿ ಅವರು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡುತ್ತದೆ ಎಂದು ಸಹ ಅವರು ಹೇಳಿದ್ದಾರೆ.

2.11 ಅವರು ಮಾಹಿತಿ ಹಕ್ಕು ಅಧಿನಿಯಮದ ಅಧಿನಿಯಮಿತಿಯನ್ನು ಭಾರತದ ಇತಿಹಾಸದಲ್ಲಿ ರಾಜಕೀಯ ಸ್ವಾತಂತ್ರ್ಯದ ಮಹಾಸನ್ನದು ಎಂದು ಹೇಳಿದರು.

2.12 ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಸನ್ಮಾನ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣ ಇವರು ವಿಶೇಷ ಭಾಷಣ ಮಾಡಿದರು.

2.13 ಭಾರತ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಸನ್ಮಾನ್ಯ ನ್ಯಾಯಮೂರ್ತಿ ಸಂತೋಷ್‌ಹೆಗಡೆ ಇವರು ಸರ್ಕಾರಿ ರಹಸ್ಯಗಳ ಅಧಿನಿಯಮ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಕುರಿತು ಮಾತನಾಡಿದರು ಮತ್ತು ಶ್ರೀ ವರ್ಕಲಾ ರಾಧಾಕೃಷ್ಣನ್, ಸಂಸತ್ ಸದಸ್ಯರು ಇವರು ಮಾಹಿತಿ ಹಕ್ಕು ಅಧಿನಿಯಮದ ಅಧಿನಿಯಮಿತಿಯ ಹಿನ್ನೆಲೆ ಕುರಿತು ಮಾತನಾಡಿದರು.

2.14 ಎರಡು ದಿನಗಳ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ತಾಂತ್ರಿಕ ಅಧಿವೇಶನ ಮತ್ತು ಸಮೂಹ ಚರ್ಚೆಗೋಷ್ಠಿಗಳಿದ್ದವು. ನಿವೃತ್ತ ಭಾರತದ ಮುಖ್ಯ ನ್ಯಾಯಮೂರ್ತಿಗಳಾದ ಸನ್ಮಾನ್ಯ ನ್ಯಾಯಮೂರ್ತಿ ಆರ್.ಸಿ. ಲಾಹೋಟಿ ಇವರು ತಾಂತ್ರಿಕ ಅಧಿವೇಶನ–**I** ರ ಅಧ್ಯಕ್ಷತೆ ವಹಿಸಿದ್ದರು ಮತ್ತು ಆಡಳಿತ ಸುಧಾರಣಾ ಆಯೋಗದ ಸದಸ್ಯರಾದ ಡಾ: ಎ.ಪಿ. ಮುಖರ್ಜಿ ಇವರು ಸಹ ಅಧ್ಯಕ್ಷತೆವಹಿಸಿದ್ದರು. "ಭಾರತದ ಸ್ವಾತಂತ್ರ್ಯ: ಸ್ಥಿತಿಗತಿ, ಪ್ರಾಮುಖ್ಯತೆ ಹಾಗೂ ಆಡಳಿತದ ಮೇಲಿನ ಪರಿಣಾಮಗಳು" ಎಂಬುದು ತಾಂತ್ರಿಕ ಅಧಿವೇಶನದ ವಿಷಯವಾಗಿತ್ತು.

2.15 ಭಾರತದ ಹಿಂದಿನ ಮುಖ್ಯ ನ್ಯಾಯಮೂರ್ತಿಗಳಾದ ಸನ್ಮಾನ್ಯ ನ್ಯಾಯಮೂರ್ತಿ ಎಸ್. ರಾಜೇಂದ್ರಬಾಬು ಇವರು ತಾಂತ್ರಿಕ ಅಧಿವೇಶನ–**II** ರ ಅಧ್ಯಕ್ಷತೆ ವಹಿಸಿದ್ದರು ಹಾಗೂ ಆಡಳಿತ ಸುಧಾರಣಾ ಆಯೋಗದ ಸದಸ್ಯರಾದ ಡಾ: ಜಯಪ್ರಕಾಶ ನಾರಾಯಣ್ ಇವರು ಸಹ ಅಧ್ಯಕ್ಷತೆ ವಹಿಸಿದ್ದರು. "ಸ್ವಾತಂತ್ರ್ಯದ ನಿರ್ಬಂಧಗಳು: ಗೌಪ್ಯತೆ, ವರ್ಗೀಕರಣಗಳು ಹಾಗೂ ಆಚರಣೆಗಳು" ಎಂಬುದು ತಾಂತ್ರಿಕ ಅಧಿವೇಶನದ ವಿಷಯವಾಗಿತ್ತು.

2.16 ತರುವಾಯ, ಅಧ್ಯಕ್ಷ ಹಾಗೂ ಕಾರ್ಯಕಲಾಪ ವರದಿಗಾರರಿರುವ ನಾಲ್ಕು ಸಮೂಹಗಳನ್ನು ರಚಿಸಲಾಗಿತ್ತು. ಆ ಸಮೂಹಗಳಿಗೆ ವಹಿಸಲಾದ ವಿಷಯಗಳು ಈ ಮುಂದಿನಂತಿವೆ:

i. ಸರ್ಕಾರದ ಕಾರ್ಯನಿರ್ವಹಣಾ ಶಾಖೆಯಲ್ಲಿ ಅಧಿನಿಯಮದ ಅನ್ವಯ
ii. ನ್ಯಾಯಿಕ ಶಾಖೆಗೆ ಈ ಅಧಿನಿಯಮದ ಅನ್ವಯ
iii. ಮಾಹಿತಿ ಪ್ರಸರಣ: ಪಾತ್ರ ಹಾಗೂ ಹೊಣೆಗಾರಿಕೆಗಳು
iv. ಸ್ಥಳೀಯ ಸರ್ಕಾರಿ ಸಂಸ್ಥೆಗಳಲ್ಲಿ ಮಾಹಿತಿ ಹಕ್ಕು.

2.17 ಎರಡನೇ ದಿನ ಎಂದರೆ, 12/12/2005ರಂದು ಸರ್ವ ಸದಸ್ಯರ ಅಧಿವೇಶನದಲ್ಲಿ ಸಮೂಹಗಳು ತಮ್ಮ ತಮ್ಮ ಶಿಫಾರಸ್ಸುಗಳನ್ನು ಸಲ್ಲಿಸಿದರು. ಈ ಶಿಫಾರಸ್ಸುಗಳನ್ನು ಆಡಳಿತ ಸುಧಾರಣಾ ಆಯೋಗದ ಪ್ರಥಮ ವರದಿಯಲ್ಲಿ ಸೇರಿಸಲಾಗಿದೆ.

**ಡಿ. ದಿನಾಂಕ 27 ಮತ್ತು 28/2/2006ರಂದು ಯಶವಂತರಾವ್ ಚವ್ಹಾಣ ಅಭಿವೃದ್ಧಿ ನಿರ್ವಹಣಾ ಅಕಾಡೆಮಿ (ವೈ.ಎ.ಎಸ್.ಹೆಚ್.ಎ.ಡಿ.ಎ) ಪುಣೆಯಲ್ಲಿ ಎಲ್ಲಾ ರಾಜ್ಯ ಮುಖ್ಯ ಮಾಹಿತಿ ಆಯುಕ್ತರುಗಳ ಸಮ್ಮೇಳನ**

2.18 2005ರಲ್ಲಿ ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಯಶವಂತರಾವ್ ಚವ್ಹಾಣ ಅಭಿವೃದ್ಧಿ ನಿರ್ವಹಣಾ ಅಕಾಡೆಮಿ ಹಾಗೂ ಉತ್ತಮ ಆಡಳಿತ ಕೇಂದ್ರ ಹೈದ್ರಾಬಾದ್ ಇವುಗಳನ್ನು ಮಾಹಿತಿ ಹಕ್ಕು ಅಧಿನಿಯಮವನ್ನು ಅನುಷ್ಠಾನಗೊಳಿಸುವಲ್ಲಿ ತರಬೇತಿ ಹಾಗೂ ಸಾಮರ್ಥ್ಯ ರೂಪಿಸುವುದಕ್ಕಾಗಿ ರಾಷ್ಟ್ರೀಯ ಅನುಷ್ಠಾನ ಏಜೆನ್ಸಿಗಳಾಗಿ ಘೋಷಿಸಿದೆ. ಕಾರ್ಯಕ್ರಮಕ್ಕೆ ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (ಯು.ಎನ್.ಡಿ.ಪಿ)ವು ಹಣಕಾಸು ನೆರವನ್ನು ಒದಗಿಸಿದೆ. ಅಸ್ಸಾಂ, ಆಂಧ್ರಾಪ್ರದೇಶ, ಛತ್ತಿಸ್‌ಘಡ, ಕೇರಳ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ್, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಉತ್ತರಾಖಂಡ ಈ 12 ರಾಜ್ಯಗಳನ್ನು ಸಾಮರ್ಥ್ಯ ರೂಪಿಸುವುದಕ್ಕಾಗಿ ಆಯ್ಕೆ ಮಾಡಲಾಗಿತ್ತು.

2.19 ಸಂಬಂಧಪಟ್ಟ ರಾಜ್ಯ ಆಡಳಿತ ತರಬೇತಿ ಸಂಸ್ಥೆ (ಎ.ಟಿ.ಐ)ಗಳನ್ನು ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ರಾಜ್ಯಮಟ್ಟದ ಅನುಷ್ಠಾನ ಏಜೆನ್ಸಿಗಳಾಗಿ ನೇಮಕ ಮಾಡಲಾಗಿತ್ತು.

2.20 ಅದಕ್ಕನುಸಾರವಾಗಿ, ಆಡಳಿತ ತರಬೇತಿ ಸಂಸ್ಥೆ ಮೈಸೂರನ್ನು ಕರ್ನಾಟಕದಲ್ಲಿ ಮಾಹಿತಿ ಪಡೆಯುವುದಕ್ಕಾಗಿ ತರಬೇತಿ ನೀಡುವ ಹಾಗೂ ಸಾಮರ್ಥ್ಯ ರೂಪಿಸುವ ರಾಜ್ಯಮಟ್ಟದ ಅನುಷ್ಠಾನ ಏಜೆನ್ಸಿಯಾಗಿ ನೇಮಕ ಮಾಡಲಾಗಿದೆ. ಮಾಹಿತಿ ಹಕ್ಕಿಗಾಗಿ ಸಾಮರ್ಥ್ಯ ರೂಪಿಸುವ ಕಾರ್ಯಕ್ರಮದ ಅಡಿಯಲ್ಲಿ ಹಿಂದುಳಿದ ಜಿಲ್ಲೆಗಳಾದ ಬೀದರ್ ಹಾಗೂ ಚಿತ್ರದುರ್ಗ ಈ ಎರಡು ಜಿಲ್ಲಾ ತರಬೇತಿ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿತ್ತು. ಈ ತರಬೇತಿ ಸಂಸ್ಥೆಗಳು ಸರ್ಕಾರಿ ಸಿಬ್ಬಂದಿಗಳಿಗೆ, ನಾಗರಿಕರಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ.

2.21 ಉತ್ತಮ ಆಡಳಿತ ಕೇಂದ್ರ ಹೈದ್ರಾಬಾದ್ ಇದು ಸಾರ್ವಜನಿಕ ಪ್ರಾಧಿಕಾರಗಳ, ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಅಪೀಲು ಪ್ರಾಧಿಕಾರಿಗಳ, ಮಾಹಿತಿ ಕೋರುವವರ, ನಾಗರಿಕ ಸಮಾಜ ಸಂಘಟನೆ ಇತ್ಯಾದಿಗಳ ಪ್ರಯೋಜನಕ್ಕಾಗಿ ಮಾಹಿತಿ ಹಕ್ಕು ಅಧಿನಿಯಮದ ಅನುಷ್ಠಾನ ಹಾಗೂ ಅದರ ಉಪಯೋಗ ಕುರಿತು ಕೈಪಿಡಿಗಳನ್ನು ಹಾಗೂ ಗೈಡ್‌ಗಳನ್ನು ಹೊರತಂದಿದೆ.

2.22 ಯಶದಾ (YASHADA) ಮುಖ್ಯ/ಮಾಹಿತಿ ಆಯುಕ್ತರು ಗಳಿಗಾಗಿ 2006ರ ಫೆಬ್ರವರಿ 27 ಮತ್ತು 28ರಂದು ಎರಡು ದಿವಸಗಳ ಕಾರ್ಯಾಗಾರವನ್ನು ಆಯೋಜಿಸಿತ್ತು. ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಮಾಹಿತಿ ಆಯುಕ್ತರು ಭಾಗವಹಿಸಿದ್ದರು.

2.23. ಕಾರ್ಯಾಗಾರದಲ್ಲಿನ ಚರ್ಚೆಗಳು ಮುಖ್ಯವಾಗಿ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ (UNDP) ಆಶ್ರಯದಲ್ಲಿ ಮತ್ತು ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಆಶ್ರಯದಲ್ಲಿ ಕೈಗೊಂಡ ತರಬೇತಿ ಹಾಗೂ ಸಾಮರ್ಥ್ಯ ರೂಪಿಸುವ ಪ್ರಾಜೆಕ್ಟ್ ಮೇಲೆ, ಮಾಹಿತಿ ಶಾಸನಗಳ ಸ್ವಾತಂತ್ರ್ಯದ ಅನುಷ್ಠಾನದಲ್ಲಿ ಬೇರೆ ಬೇರೆ ರಾಷ್ಟ್ರಗಳು ಅನುಸರಿಸಿದ ಉತ್ತಮ ಆಚರಣೆಗಳು, ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ಮಾಹಿತಿ ಆಯುಕ್ತರಿಗೆ ಸಂಬಂಧಿಸಿದ ಮೇಲ್ವಿಚಾರಣೆ ಹಾಗೂ ವರದಿ, ವೆಬ್ ಸೈಟ್‌ಗಳ ಅಭಿವೃದ್ಧಿ, ಗಣಕೀಕರಣ ಸೇರಿದಂತೆ ದಾಖಲೆಗಳ ನಿರ್ವಹಣೆ, ಸಾರ್ವಜನಿಕರ ಮಾಹಿತಿಗಾಗಿ ವೆಬ್‌ಸೈಟಗಳಲ್ಲಿ ಪೂರ್ವ ಪ್ರಕಟಣೆಗಳ ಪ್ರಕಟಣೆ ಮುಂತಾದವುಗಳ ಕೇಂದ್ರೀಕೃತವಾಗಿತ್ತು.

**ಇ. ನೆಟ್‌ವರ್ಕ್ ತಂತ್ರಾಂಶ ಮತ್ತು ವೆಬ್‌ಸೈಟ್ ಅಭಿವೃದ್ಧಿ ಕುರಿತು ದಿನಾಂಕ 16/3/2006ರಂದು ರಾಷ್ಟ್ರೀಯ ಮಾಹಿತಿ ಕೇಂದ್ರ (NIC)ದ ತಾಂತ್ರಿಕ ಮಹಾ ಉಪನಿರ್ದೇಶಕರೊಂದಿಗೆ ಚರ್ಚೆ:**

2.24 ಕರ್ನಾಟಕ ಮಾಹಿತಿ ಆಯೋಗವು ಕರ್ನಾಟಕ ಮಾಹಿತಿ ಆಯೋಗಕ್ಕಾಗಿನ ನೆಟ್‌ವರ್ಕಿಂಗ್ ತಂತ್ರಾಂಶ ಮತ್ತು ವೆಬ್‌ಸೈಟ್ ಅಭಿವೃದ್ಧಿ ಕುರಿತು ರಾಷ್ಟ್ರೀಯ ಮಾಹಿತಿ ಕೇಂದ್ರ (NIC)ದ ತಾಂತ್ರಿಕ ನಿರ್ದೇಶಕರು ಹಾಗೂ ಅವರ ತಂಡದೊಂದಿಗೆ ಸಭೆ ನಡೆಸಿ ಚರ್ಚಿಸಲಾಯಿತು.

2.25 ರಾಷ್ಟ್ರೀಯ ಮಾಹಿತಿ ಕೇಂದ್ರ (NIC)ದ ನಿರ್ದೇಶಕರು "ಇ–ಆಡಳಿತ" ಇಲಾಖೆಯ ಕೋರಿಕೆ ಮೇಲೆ, ಕರ್ನಾಟಕ ಸರ್ಕಾರಕ್ಕೆ ಸಾರ್ವಜನಿಕ ಪ್ರಾಧಿಕಾರಗಳು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಪ್ರಥಮ ಅಪೀಲು ಪ್ರಾಧಿಕಾರದಿಂದ ಗ್ರಾಮ ಮಟ್ಟದವರೆಗೆ ಸಂಬಂಧಪಟ್ಟ ದತ್ತಾಂಶ (ಡಾಟಾ)ವನ್ನು ಅಪ್‌ಲೋಡ್ ಮಾಡಲು ಸಾರ್ವಜನಿಕ ಪ್ರಾಧಿಕಾರಗಳನ್ನು ಸಶಕ್ತಗೊಳಿಸುವ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ಉಪಕಾರ್ಯದರ್ಶಿ, ಸಿಆಸುಇ(ಆಸು) ಇವರು ಜಿಲ್ಲಾ ಹಾಗು ತಾಲೂಕು ಮಟ್ಟಗಳಲ್ಲಿ ಸಾರ್ವಜನಿಕ ಪ್ರಾಧಿಕಾರವಾರು ದತ್ತಾಂಶವನ್ನು ಸಂಗ್ರಹಿಸಲು ಕ್ರೋಢೀಕರಿಸಲು ಮತ್ತು ಅಪ್‌ಲೋಡ್ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ.

2.26 ಆಯೋಗವು ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ತಯಾರಿಸಬೇಕಾದ ವಾರ್ಷಿಕ ವರದಿಗಳಿಗಾಗಿ ಮಾಹಿತಿ ಸಂಗ್ರಹಣೆ, ಆಯೋಗವು ತಯಾರಿಸಿದ ನಮೂನೆ ಕುರಿತು ಚರ್ಚಿಸಲಾಗಿದೆ. ಸಾರ್ವಜನಿಕ ಪ್ರಾಧಿಕಾರಗಳಿಗೆ ದತ್ತಾಂಶ ಪ್ರಸರಣ/ರವಾನೆ ಮಾಡುವುದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ದತ್ತಾಂಶ (ಡಾಟಾ) ಸಂಗ್ರಹಿಸುವುದು ಹಾಗೂ ಕ್ರೋಢೀಕರಿಸುವುದು ಹೇಗೆ,

ಅವರು ಸಚಿವಾಲಯದಲ್ಲಿನ ಇಲಾಖೆಗಳಿಗೆ ಅದನ್ನು ತಿರುಗಿ ಕಳುಹಿಸುವುದು ಹೊಣೆ ಎಂಬುದನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ (NIC)ವು ತೋರಿಸಿಕೊಡಲು ತೀರ್ಮಾನಿಸಿದೆ. ಇಲಾಖೆಗಳು ಕ್ರೋಢೀಕರಿಸಿದ ದತ್ತಾಂಶವನ್ನು ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ಆಯೋಗಕ್ಕೆ ಸಲ್ಲಿಸುತ್ತವೆ.

**ಎಫ್. ಮಾಹಿತಿ ಹಕ್ಕು ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಮಾಹಿತಿ ಆಯೋಗದ ವಾರ್ಷಿಕ ವರದಿ ತಯಾರಿಕೆ ಕುರಿತು ಚರ್ಚಿಸಲು ದಿನಾಂಕ 23/8/2006ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳೊಂದಿಗೆ ಸಭೆ.**

2.27 ಕರ್ನಾಟಕ ಮಾಹಿತಿ ಆಯೋಗವು ತನ್ನ ಪ್ರಥಮ ವಾರ್ಷಿಕ ವರದಿ ತಯಾರಿಕೆ ಕುರಿತು ಚರ್ಚಿಸಲು ದಿನಾಂಕ: 23/8/2006 ರಂದು ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ; ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಸಕ್ಷಮ ಪ್ರಾಧಿಕಾರಗಳ ಪ್ರತಿನಿಧಿಗಳು, ರಾಷ್ಟ್ರೀಯ ಮಾಹಿತಿ ಕೇಂದ್ರದ ಅಧಿಕಾರಿಗಳು ಹಾಗೂ ಇತರ ಅಧಿಕಾರಿಗಳೊಂದಿಗೆ ಸಭೆ ನಡೆಸಿತು.

2.28 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಾದ ಶ್ರೀಮತಿ ಮಾಲತಿ ದಾಸ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

2.29 ಶ್ರೀ ಕೆ.ಕೆ. ಮಿಶ್ರಾ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಇವರು ಮಾಹಿತಿ ಹಕ್ಕು ಅಧಿನಿಯಮದ ವಾಸ್ತವಿಕ ಕಾರ್ಯ, ಆಯೋಗದ ವಾರ್ಷಿಕ ವರದಿಗಳ ಮೂಲಕ ಅಧಿನಿಯಮದಲ್ಲಿ ತನಗೆ ಅವಕಾಶ ಕಲ್ಪಿಸಿರುವ ಅಂಶಗಳ ಮೇಲ್ವಿಚಾರಣೆ ಮಾಡುವುದಾಗಿದೆ ಎಂದು ವಿವರಿಸಿದರು. ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ತಮ್ಮ ನಿಯಂತ್ರಣದ ಅಡಿಯಲ್ಲಿ ಬರುವ ಸಾರ್ವಜನಿಕ ಪ್ರಾಧಿಕಾರಗಳಿಂದ ಅಗತ್ಯ ಮಾಹಿತಿಯನ್ನು ಸಂಗ್ರಹಿಸಿ, ಅದನ್ನು ಕ್ರೋಢೀಕರಿಸಿ, ಕ್ರೋಢೀಕರಿಸಿದ ದತ್ತಾಂಶವನ್ನು ಆಯೋಗಕ್ಕೆ ಪೂರೈಸುವುದಕ್ಕೆ ಅಧಿನಿಯಮ ಅವಕಾಶ ಕಲ್ಪಿಸಿದೆ.

2.30 ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ, ಇವರು ಪ್ರಮುಖ ವಿಷಯ ಮಂಡನೆ (ಪವರ್-ಪಾಯಿಂಟ್ ಪ್ರಜೆಂಟೇಷನ್)ಯೊಂದಿಗೆ ವಿಷಯದ ಮೇಲಿನ ಚರ್ಚೆ ಪ್ರಾರಂಭಿಸಿದರು. ಅವರು ಆಯೋಗದ ವಾರ್ಷಿಕ ವರದಿಗಳ ತಯಾರಿಕೆಗೆ ಪ್ರತಿ ಇಲಾಖೆಯು ಅದಕ್ಕೆ ವಿಷಯವನ್ನು ಒದಗಿಸುವುದಕ್ಕೆ ಸಂಬಂಧಿಸಿದ 25(3)ನೇ ಪ್ರಕರಣದ ಅಡಿಯಲ್ಲಿನ ಪ್ರಮುಖ ಉಪಬಂಧಗಳ ಸಂಕ್ಷಿಪ್ತ ಪರಿಚಯವನ್ನು ನೀಡಿದರು.

2.31 **ಅಲ್ಲದೆ ಈ ಮುಂದಿನ ತೀರ್ಮಾನಗಳನ್ನು ಕೈಗೊಳ್ಳಲಾಯಿತು:**

i. **ಕರ್ನಾಟಕ ಮಾಹಿತಿ ಆಯೋಗಕ್ಕೆ ಮಾಹಿತಿ ಪೂರೈಕೆ**: ಹಣಕಾಸು ವರ್ಷಕ್ಕಾಗಿ ಎಲ್ಲಾ ಇಲಾಖೆಗಳು ಮತ್ತು ಸರ್ಕಾರಿ ಸಂಸ್ಥೆಗಳು ತಮಗೆ ಹಂಚಿಕೆ ಮಾಡಲಾದ ಬಜೆಟ್ ಹಂಚಿಕೆಗಳು, ಯೋಜನೆಗಳ ಕಾರ್ಯ ಪ್ರಗತಿಗಳು, ಕಾರ್ಯಯೋಜನೆಗಳು ಹಾಗೂ ವಾರ್ಷಿಕ ವರದಿಗಳನ್ನು

ತಯಾರಿಸಲಾಗುವುದರಿಂದ ಹಣಕಾಸು ವರ್ಷವನ್ನು ಉಲ್ಲೇಖಿತ ವರ್ಷ ಎಂಬುದಾಗಿ ಅಂಗೀಕರಿಸತಕ್ಕದ್ದೆಂದು ಆಯೋಗವು ತೀರ್ಮಾನಿಸಿತು. ಅಲ್ಲದೇ, ಮಾಹಿತಿ ಹಕ್ಕು ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ತನ್ನ ಪ್ರಥಮ ವಾರ್ಷಿಕ ವರದಿಯ ತಯಾರಿಕೆಗಾಗಿ ಆಯೋಗಕ್ಕೆ ಅಗತ್ಯವಿರುವ ಮಾಹಿತಿಯನ್ನು ದಿನಾಂಕ 30.9.2006ರ ಒಳಗೆ ಎಲ್ಲಾ ಇಲಾಖೆಗಳು ಒದಗಿಸತಕ್ಕದ್ದೆಂದು ಸಹ ತೀರ್ಮಾನಿಸಲಾಯಿತು.

ii. **ಇಲಾಖೆಗಳಿಂದ ಪಿ.ಐ.ಒ. ಗಳ, ಎ.ಪಿ.ಐ.ಒ. ಗಳ ಮತ್ತು ಸಾರ್ವಜನಿಕ ಪ್ರಾಧಿಕಾರಗಳ ಪಟ್ಟಿಗಳ ತಯಾರಿಕೆ ಮತ್ತು ಅವರ ವೆಬ್‌ಸೈಟ್‌ಗಳಲ್ಲಿ ಅವುಗಳ ಪ್ರಕಟಣೆ:** ಅಧಿನಿಯಮದ 4(1)(ಬಿ) ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳು, ಪಿ ಐ ಒ ಗಳು ಮತ್ತು ಎ ಪಿ ಐ ಒ ಗಳು ಮತ್ತು ಸ್ವಯಂ ಪ್ರೇರಿತ ಪ್ರಕಟಣೆಯ ಮೇಲೆ ಅಂಕಿಅಂಶಗಳನ್ನು 30.9.2006ರಂದು ಸಂಬಂಧಪಟ್ಟ ಇಲಾಖೆಗಳ ವೆಬ್‌ಸೈಟ್‌ಗಳಲ್ಲಿ ದಾಖಲು ಮಾಡತಕ್ಕದ್ದು.

iii. **ದಾಖಲೆಗಳ ವಿಷಯಪಟ್ಟಿ (ಕ್ಯಾಟ್‌ಲಾಗ್), ಸೂಚಿಕೆ-ತಯಾರಿಕೆ-ಮತ್ತು ನಿರ್ವಹಣೆ:** ತತ್‌ಕ್ಷಣವೇ ಅಧಿನಿಯಮದ 4(1)(ಎ) ನೇ ಪ್ರಕರಣದ ಅಡಿಯಲ್ಲಿ ಯೋಜಿಸಲಾದಂತೆ ದಾಖಲೆಗಳ ವಿಷಯಪಟ್ಟಿ ಮತ್ತು ಸೂಚಿಕೆಯ ಶಾಸನಬದ್ಧ ಅಗತ್ಯತೆಗಳನ್ನು ಪೂರೈಸುವುದಕ್ಕೆ ಆಯೋಗವು ಸಾರ್ವಜನಿಕ ಪ್ರಾಧಿಕಾರಗಳನ್ನು ಕೇಳಿತು. ಅದನ್ನೇ 2005ರ ಅಕ್ಟೋಬರ್ 12ರಂದು ಅಥವಾ ಅದಕ್ಕೆ ಮೊದಲು ಮಾಡಲಾಗುವುದರಿಂದ, ರಾಜ್ಯದಲ್ಲಿ ಸಾರ್ವಜನಿಕ ದಾಖಲೆಗಳ ನಿರ್ವಹಣೆಯನ್ನು ನಿಯಂತ್ರಿಸಲು ಸಂಸತ್ತಿನ ಮೂಲಕ ಅಧಿನಿಯಮಿತಗೊಂಡ ಸಾರ್ವಜನಿಕ ದಾಖಲೆಗಳ ಅಧಿನಿಯಮ – 1983ರ ಅನುಸಾರ ಶಾಸನ ರಚನೆ ಮಾಡಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವಂತೆ ಸಹ ಆಯೋಗವು ಸೂಚಿಸಿತು.

iv. **ಪಿ.ಐ.ಒ. ಗಳು ಮತ್ತು ಇತರೆ ಅಧಿಕಾರಿಗಳ ತರಬೇತಿ:** ಅಧಿನಿಯಮದ 26ನೇ ಪ್ರಕರಣದ ಅಡಿಯಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಅದರಲ್ಲೂ ವಿಶೇಷವಾಗಿ ಪಿ.ಐ.ಒ.ಗಳಿಗೆ ತರಬೇತಿ ನೀಡುವುದು ಮತ್ತು ಸಂಬಂಧಪಟ್ಟ ತರಬೇತಿ ಸಲಕರಣೆಗಳನ್ನು ಒದಗಿಸುವ ಬಗ್ಗೆ ಚರ್ಚಿಸುವುದು ಸರ್ಕಾರದ ಹೊಣೆಯಾಗಿದೆ. ಎ.ಟಿ.ಐ.ನ. ಮಹಾನಿರ್ದೇಶಕರು, ಮೈಸೂರು, ಇವರು ಸಭೆಗೆ ಆಹ್ವಾನಿತರಾಗಿದ್ದು ತರಬೇತಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಸಾಕಷ್ಟು ನಿಧಿಯನ್ನು ಬಿಡುಗಡೆ ಮಾಡುವ ರೀತಿ ಕೋರಿ ಸರ್ಕಾರದ ಆರ್ಥಿಕ ಇಲಾಖೆಗೆ ಡಿ.ಪಿ.ಎ.ಆರ್(ಎ.ಆರ್) ಮೂಲಕ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಲು ಒಪ್ಪಿಕೊಂಡಿರುತ್ತಾರೆ.

v. **ಮಾಹಿತಿ ಹಕ್ಕು ಅಧಿನಿಯಮದ ಬಳಕೆಗೆ ಸಂಬಂಧಪಟ್ಟಂತೆ ನಾಗರಿಕರಲ್ಲಿ ಅರಿವು ಮೂಡಿಸುವುದು ಮತ್ತು ಶಿಕ್ಷಣ ನೀಡುವುದು:** ಅಧಿನಿಯಮದ 26ನೇ ಪ್ರಕರಣದಂತೆ, ಸರ್ಕಾರವು , ಸಾರ್ವಜನಿಕ ಶಿಕ್ಷಣ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಅಗತ್ಯಪಡಿಸುತ್ತದೆ ಹಾಗೂ ಅಧಿನಿಯಮದ

26(2)ನೇ ಪ್ರಕರಣದಂತೆ ರಾಜ್ಯದ ಆಡಳಿತ ಭಾಷೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ "ಬಳಕೆದಾರರ ಮಾರ್ಗಸೂಚಿ" ಎಂಬ ಮಾಹಿತಿ ಸಂಗ್ರಹವನ್ನು ಒದಗಿಸುವಂತೆ ಸರ್ಕಾರವನ್ನು ಅಗತ್ಯಪಡಿಸುತ್ತದೆ ಎಂಬುದನ್ನು ಸಹ ಆಯೋಗವು ಸರ್ಕಾರದ ಗಮನಕ್ಕೆ ತಂದಿದೆ. ಚರ್ಚೆಯ ನಂತರ, ಮೈಸೂರಿನಲ್ಲಿರುವ ಎ.ಟಿ.ಐ.ನ ಮಹಾನಿರ್ದೇಶಕರು ಅಪೇಕ್ಷಿಸಿದ ರೀತಿ ಸಾಕಷ್ಟು ನಿಧಿಗಳನ್ನು ಒದಗಿಸುವ ಮೂಲಕ ಈ ಕಾರ್ಯವನ್ನು ಎ.ಟಿ.ಐ ಮೈಸೂರು, ಇದರ ಮೂಲಕ ಸರ್ಕಾರವು ಕೈಗೆತ್ತಿಕೊಳ್ಳಬೇಕೆಂದು ಒಪ್ಪಿಕೊಳ್ಳಲಾಯಿತು.

**ಜಿ. ಮಾಹಿತಿ ಹಕ್ಕು ಅಧಿನಿಯಮ ಪ್ರಾರಂಭಗೊಂಡು ಒಂದು ವರ್ಷ ಪೂರೈಸಿದ್ದಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯ ಸಮ್ಮೇಳನ:**

2.32 ಕೇಂದ್ರ ಮಾಹಿತಿ ಆಯೋಗ ಮತ್ತು ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಜಂಟಿಯಾಗಿ, ಮಾಹಿತಿ ಹಕ್ಕು ಅಧಿನಿಯಮವು ಜಾರಿಗೊಂಡು ಒಂದು ವರ್ಷ ಪೂರೈಸಿದ್ದರ ಕುರಿತಂತೆ ಒಂದು ರಾಷ್ಟ್ರೀಯ ಸಮ್ಮೇಳನವನ್ನು 2006ರ ಅಕ್ಟೋಬರ್ 13ರಿಂದ 15ರವರೆಗೆ ನವದೆಹಲಿಯ ವಿಜ್ಞಾನ ಭವನದಲ್ಲಿ ವ್ಯವಸ್ಥೆಗೊಳಿಸಿದ್ದವು. ಕೇಂದ್ರ ಮುಖ್ಯ ಮಾಹಿತಿ ಆಯುಕ್ತರು, ಕೇಂದ್ರ ಮಾಹಿತಿ ಆಯುಕ್ತರುಗಳು, ಎಲ್ಲಾ ರಾಜ್ಯಗಳ ಮಾಹಿತಿ ಆಯೋಗಗಳ ರಾಜ್ಯ ಮುಖ್ಯ ಮಾಹಿತಿ ಆಯುಕ್ತರುಗಳು ಮತ್ತು ರಾಜ್ಯ ಮಾಹಿತಿ ಆಯುಕ್ತರುಗಳು, ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು, ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಶ್ರೀ ಅಣ್ಣಾ ಹಜಾರೆ ಅವರೂ ಸೇರಿದಂತೆ ಎಲ್ಲಾ ಪ್ರಮುಖ ಸಕ್ರಿಯ ಕಾರ್ಯಕರ್ತರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

2.33 2006ರ ಅಕ್ಟೋಬರ್ 13ರಂದು ಭಾರತದ ರಾಷ್ಟ್ರಪತಿಯವರಾದ ಡಾ: ಎ ಪಿ ಜೆ ಅಬ್ದುಲ್ ಕಲಾಂ ಅವರು ಸಮ್ಮೇಳನವನ್ನು ಉದ್ಘಾಟಿಸಿದರು.

2.34 ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಉತ್ತಮ ಆಡಳಿತವನ್ನು ಒಂದು ಪ್ರಮುಖ ಗುರಿಸಾಧನೆ ಎಂಬುದಾಗಿ ವಿಶ್ವವ್ಯಾಪ್ತಿ ಅನೇಕ ದೇಶಗಳು ಮಾನ್ಯಮಾಡಿವೆ (ಒಪ್ಪಿವೆ) ಮತ್ತು ಏಕೋದ್ದೇಶಿತ ಸಾಧನೆಗಳು ಸರ್ಕಾರಗಳನ್ನು ನಾಗರಿಕ – ಕೇಂದ್ರೀಕೃತವನ್ನಾಗಿ ಮಾಡಬಲ್ಲವು ಎಂದು ಹೇಳಿದರು. ಮುಂದುವರೆದು ಅವರು, ಸರ್ಕಾರವು ಎಲ್ಲಾ ಮಟ್ಟಗಳಲ್ಲೂ 'ಇ–ಆಡಳಿತ' ವನ್ನು ಜಾರಿಗೆ ತರತಕ್ಕದ್ದೆಂದು ಇದರಿಂದಾಗಿ ನಾಗರಿಕರ ವಿಶ್ವಾಸಗಳಿಸಬಹುದಾಗಿದೆ ಎಂದು ಸಹ ತಿಳಿಸಿದರು. ಅವರು, ರಾಷ್ಟ್ರೀಯ 'ಇ–ಆಡಳಿತ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಅಗತ್ಯವಿದೆ ಎಂದು ಸಹ ಒತ್ತಿ ಹೇಳಿದರು ಮತ್ತು ರಾಜಕೀಯ ಮುಖಂಡರು, ಸರ್ಕಾರಿ ಸೇವೆಗಳು, ಮಾಧ್ಯಮಗಳು, ಸಮಾಜ ಪರಿವರ್ತಕರು ಮತ್ತು ನಾಗರಿಕರಂಥ ಎಲ್ಲಾ ಕಂಕಣಬದ್ಧ ವ್ಯಕ್ತಿಗಳು ಕ್ರಿಯಾಶೀಲರಾಗಿ ಭಾಗವಹಿಸುವಂತೆ ಕರೆಕೊಟ್ಟರು.

2.35 ವಿವಿಧ ವಿಷಯಗಳ ಮೇಲೆ ಚರ್ಚಿಸುವ ಸಲುವಾಗಿ ಸಭೆಯಲ್ಲಿ ಭಾಗವಹಿಸಿದವರನ್ನು ನಾಲ್ಕು ತಜ್ಞ ಸಮಿತಿಗಳೆಂಬುದಾಗಿ ಪಟ್ಟಿ ಮಾಡಲಾಯಿತು. "ನಾಗರಿಕರ ಧ್ವನಿ" ಕುರಿತು ಸಭೆಯ ಸಂದರ್ಭದಲ್ಲಿ ನಾಗರಿಕರಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸಲು ಒಂದು ಅವಕಾಶವನ್ನು ಕಲ್ಪಿಸಲಾಯಿತು.

2.36 ಎರಡನೇ ದಿನ, ಅಂದರೆ, 2006ರ ಅಕ್ಟೋಬರ್ 14ರಂದು ಮಹಾರಾಷ್ಟ್ರದ ಮಾಜಿ ರಾಜ್ಯಪಾಲರಾದ ಡಾ: ಪಿ.ಸಿ. ಅಲೆಕ್ಸಾಂಡರ್, ಎಂ.ಪಿ. ಅವರು ಮುಖ್ಯ ಭಾಷಣವನ್ನು ಮಾಡಿದರು. ಅವರು ಮಾಹಿತಿ ಹಕ್ಕು ಅಧಿನಿಯಮವು ಪ್ರಜಾಪ್ರಭುತ್ವವು ಮತ್ತಷ್ಟು ಆಳವಾಗಿ ಬೇರೂರಲು, ಅಭಿವೃದ್ಧಿಯು ತೀವ್ರಗೊಳ್ಳಲು ಮತ್ತು ಸಾರ್ವಜನಿಕ ಸೇವೆಗಳಲ್ಲಿ ಭ್ರಷ್ಟಾಚಾರದ ನಿರ್ಮೂಲನೆಗೆ ಸಹಾಯವಾಗಲು ಒಂದು ಸಾಧನವಾಗುವ ಉದ್ದೇಶಿತ ಸಾಧ್ಯತೆ ಇದೆ ಎಂದು ಹೇಳಿದರು. ಅವರು ಮುಂದುವರೆದು, ಮಾಹಿತಿ ಹಕ್ಕು ಸಾಮಾನ್ಯ ನಾಗರಿಕರಿಗೆ ವಾಸ್ತವಾಂಶವನ್ನು ಅರಿಯಲು ಒಂದು ಮಾರ್ಗವಾದಲ್ಲಿ ಅದು, ಸರ್ಕಾರದ ಯೋಚನಾಲಹರಿಯಲ್ಲಿ ಮತ್ತು ಸರ್ಕಾರದ ಆಡಳಿತದ ಎಲ್ಲಾ ವಿಭಾಗಗಳ ಕಾರ್ಯ ವೈಖರಿಯಲ್ಲಿ, ವರ್ತನೆಯಲ್ಲಿ, ಆಮೂಲಾಗ್ರ ಬದಲಾವಣೆಯಾಗುತ್ತದೆ ಎಂದು ಸಹ ತಿಳಿಸಿದರು. ಪ್ರಜಾರಾಜ್ಯದಲ್ಲಿ ಪ್ರಜೆಗಳೇ ಅಧಿಕಾರ ಹೊಂದಿರುವಾಗ ಪ್ರಜಾಪ್ರಭುತ್ವದಲ್ಲಿ ಮಾಹಿತಿಗಳು ಪ್ರಜೆಗಳಿಗೆ ಸಂಬಂಧಪಟ್ಟಿದ್ದವಾಗಿರುತ್ತವೆ ಹೊರತು ಸರ್ಕಾರಕ್ಕಲ್ಲ, ಆದ್ದರಿಂದ ಪ್ರಜೆಗಳೇ ಇಲ್ಲಿ ಅಂತಿಮ ಪ್ರಭುಗಳು, ಅವರಿಗೆ ಮಾಹಿತಿ ಹಕ್ಕು ಕೇಳುವ ಅಧಿಕಾರವಿದೆ ಎಂದು ತಿಳಿಸಿದರು.

2.37 ಅಧಿನಿಯಮದ ಪರಿಣಾಮಕಾರಿ ಜಾರಿಗೊಳಿಸುವಿಕೆಯಲ್ಲಿ ಮಾಹಿತಿ ಆಯುಕ್ತರುಗಳ ಪಾತ್ರ ಮತ್ತು ಜವಾಬ್ದಾರಿ ಬಗ್ಗೆಯೂ ಸಹ ಅವರು ತಿಳಿಯಪಡಿಸಿದರು.

2.38 ಸಾಯಂಕಾಲ, ಭಾರತದ ಸನ್ಮಾನ್ಯ ಪ್ರಧಾನಮಂತ್ರಿಗಳಾದ ಡಾ: ಮನಮೋಹನ್ ಸಿಂಗ್ ಅವರು ಸಮಾರೋಪ ಭಾಷಣವನ್ನು ಮಾಡಿದರು. ಅವರು ತಮ್ಮ ಸಮಾರೋಪ ಭಾಷಣದಲ್ಲಿ, ಮಾಹಿತಿ ಹಕ್ಕು ಅಧಿನಿಯಮವು "ಜನತೆಯ ಕಾನೂನು" ಆಗಿದೆ ಎಂದು ತಿಳಿಸಿದರು. ಮಾಹಿತಿ ಹಕ್ಕು ಅಧಿನಿಯಮವನ್ನು ಅನುಷ್ಠಾನಗೊಳಿಸುವುದರಿಂದ ಪರಿಜ್ಞಾನಯುತ ಮತ್ತು ಪ್ರಗತಿಪರ ಸಮಾಜದ ನಿರ್ಮಾಣವಾಗುವಲ್ಲಿ ಪ್ರಮುಖ ಮೈಲಿಗಲ್ಲಾಗುವುದೆಂಬುದು ನಮ್ಮ ವಿಚಾರಾಭಿಪ್ರಾಯವಾಗಿದೆ ಎಂದು ಸಹ ತಿಳಿಸಿದರು.

2.39 ಅಧಿನಿಯಮದ ಉಪಬಂಧಗಳು, ದೊರೆಯಬಹುದಾದ ಸಂಪನ್ಮೂಲಗಳಿಗೆ ಒಳಪಟ್ಟು ಗಣಕೀಕೃತಗೊಳಿಸಲಾಗುವ ಎಲ್ಲಾ ದಾಖಲೆಗಳು ಸಕಾಲದಲ್ಲಿ ಗಣಕೀಕೃತಗೊಳ್ಳುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಮತ್ತು ಅಭಿವೃದ್ಧಿ ಕ್ರಮಗಳಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಗ್ರಾಮಮಟ್ಟದಿಂದ ಹಿಡಿದು ಪಂಚಾಯತಿಗಳು,

ಸಮುದಾಯ ಸೇವಾ ಕೇಂದ್ರಗಳು ಮತ್ತು ಜ್ಞಾನೋದಯ ಕೇಂದ್ರಗಳ ಸಾಂಸ್ಥಿಕ ಚೌಕಟ್ಟಿನ ಅಡಿಯಲ್ಲಿ ದೇಶವ್ಯಾಪ್ತಿ ನೆಟ್‌ವರ್ಕ್(ಜಾಲ)ಗೆ ಸಂಬಂಧಪಟ್ಟಿವೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು ಕೇಳುವಂತಿರಬೇಕೆಂದು ಒತ್ತಿಹೇಳಿದರು.

**ಹೆಚ್. ಮೈಸೂರಿನಲ್ಲಿರುವ ಆಡಳಿತ ತರಬೇತಿ ಸಂಸ್ಥೆಯಲ್ಲಿ 2006ರ ಅಕ್ಟೋಬರ್ 26 ರಿಂದ 28ರವರೆಗೆ ಮಾಹಿತಿ ಹಕ್ಕಿನ ಮೇಲೆ (ವೈಎಎಸ್‌ಹೆಚ್‌ಎಡಿಎ ಮೂಲಕ ನಡೆಸಲಾಗುವ) ರಾಜ್ಯ ಸಂಬಂಧಿತ ಲಭ್ಯ ವ್ಯಕ್ತಿಗಳಿಗೆ ತರಬೇತಿ**

2.40 ಪುಣೆಯ ಯಶಾದ (ಙಂಖಊಂಆಂ) ನೆರವಿನೊಂದಿಗೆ ಆಡಳಿತ ತರಬೇತಿ ಸಂಸ್ಥೆಯು, 2006ರ ಅಕ್ಟೋಬರ್ 26 ರಿಂದ 28ರ ವರೆಗೆ ಮಾಹಿತಿಹಕ್ಕು ಅಧಿನಿಯಮದ ಮೇಲೆ ರಾಜ್ಯಗಳ ಸಂಬಂಧಿತ ಲಭ್ಯ ವ್ಯಕ್ತಿಗಳಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿತ್ತು. ಜಿಲ್ಲಾ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರೂ ಸೇರಿದಂತೆ, ಸಾ.ಮಾ.ಅ.ಗಳು, ಸಾರ್ವಜನಿಕ ಪ್ರಾಧಿಕಾರಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಇದರಲ್ಲಿ ಭಾಗವಹಿಸಿದ್ದರು. ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪುಣೆಯ ಮಾಹಿತಿಹಕ್ಕು ಘಟಕದ ಸಲಹೆಗಾರರಾದ ಶ್ರೀ ಪ್ರಮೋದ್ ಮಾನೆ ಅವರು ತಮ್ಮ ಒಟ್ಟಾರೆ ಅಭಿಪ್ರಾಯವನ್ನು ತಿಳಿಯಪಡಿಸಿದರು. ಮೈಸೂರಿನ ಎ. ಟಿ. ಐ. ನ ಮಹಾನಿರ್ದೇಶಕರಾದ ಶ್ರೀ ಸಿ.ಎಸ್. ಸುರಂಜನ್ ಅವರು ಸಭೆಯಲ್ಲಿ ಭಾಗವಹಿಸಿದವರನ್ನು ಕುರಿತು ಭಾಷಣ ಮಾಡಿದರು. ಸಭೆಯಲ್ಲಿ, ಅಧಿನಿಯಮದ ಪ್ರಮುಖ ಉಪಬಂಧಗಳೊಂದಿಗೆ ಮಾಹಿತಿ ಹಕ್ಕಿನ ಹಿನ್ನೆಲೆ, ಚಾರಿತ್ರಿಕ ಅಂಶ ಮತ್ತು ತಾತ್ವಿಕತೆ ಕುರಿತಂತೆ ವಿಷಯಗಳ ಚರ್ಚೆ ನಡೆಯಿತು.

**ಐ. ಪ್ರಾದೇಶಿಕ ಆಯುಕ್ತರು, ಬೆಳಗಾಂ ಇವರ ಮೂಲಕ ವ್ಯವಸ್ಥೆಗೊಳಿಸಲಾದ ಮಾಹಿತಿ ಹಕ್ಕು ಅಧಿನಿಯಮ, 2005 ಕುರಿತಂತೆ ತರಬೇತಿ ಮತ್ತು ಅರಿವು ಮೂಡಿಸುವ ಕಾರ್ಯಾಗಾರ**

2.41 ಪ್ರಾದೇಶಿಕ ಆಯುಕ್ತರು, ಬೆಳಗಾಂ ಇವರು ಎರಡು ದಿನಗಳ ಕಾರ್ಯಾಗಾರ ಹಾಗೂ ತರಬೇತಿ ಕಾರ್ಯಕ್ರಮವನ್ನು ಬೆಳಗಾಂ ವಿಭಾಗದ ಏಳು ಜಿಲ್ಲೆಗಳ, ಹೆಸರಿಸಲಾದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗಾಗಿ 2006ರ ನವೆಂಬರ್ 23 ಮತ್ತು 24ರಂದು ವ್ಯವಸ್ಥೆಗೊಳಿಸಿದ್ದರು. ಶ್ರೀ ಕೆ.ಎ. ತಿಪ್ಪೇಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಮತ್ತು 2006ರ ನವೆಂಬರ್ 23ರಂದು ಮುಖ್ಯ ಭಾಷಣವನ್ನು ಮಾಡಿದರು.

2.42 ಸಾರ್ವಜನಿಕ ಪ್ರಾಧಿಕಾರಗಳನ್ನು ಪ್ರತಿನಿಧಿಸುವ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳು ಈ ಕಾರ್ಯಾಗಾರ ಹಾಗೂ ತರಬೇತಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಾಗಾರವನ್ನು ಸಂಘಟಿಸುವಲ್ಲಿ ಬೆಳಗಾಂನ ಪ್ರಾದೇಶಿಕ

ಆಯುಕ್ತರಾದ ಶ್ರೀಮತಿ. ಅಮಿತಾ ಪ್ರಸಾದ್ ಮತ್ತು ಅವರ ತಂಡದವರು ಮಾಡಿದ ಸಾಧನೆ ಮತ್ತು ಕರ್ತೃತ್ವಶಕ್ತಿಯನ್ನು ಶ್ಲಾಘಿಸಲಾಯಿತು.

**ಐ. 25ನೇ ಫೆಬ್ರವರಿ, 2007ರಂದು ಜಗದ್ಗುರು ಶ್ರೀ ಶಿವರಾತ್ರೇಶ್ವರ ಕಾನೂನು ಕಾಲೇಜಿನ ವತಿಯಿಂದ ವ್ಯವಸ್ಥೆಗೊಳಿಸಿದ್ದ ಮಾಹಿತಿ ಹಕ್ಕು ಅಧಿನಿಯಮ ಕುರಿತಂತೆ ಕಾರ್ಯಾಗಾರ**

2.43 25ನೇ ಫೆಬ್ರವರಿ, 2007ರಂದು ಜಗದ್ಗುರು ಶ್ರೀ ಶಿವರಾತ್ರೇಶ್ವರ ಕಾನೂನು ಕಾಲೇಜಿನ ವತಿಯಿಂದ ವ್ಯವಸ್ಥೆಗೊಳಿಸಿದ್ದ ಕಾರ್ಯಾಗಾರದಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ರಾಜ್ಯ ಮಾಹಿತಿ ಆಯುಕ್ತರು ಭಾಗವಹಿಸಿದ್ದರು. ಈ ಕಾರ್ಯಾಗಾರದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ನಿಯಂತ್ರಣದಲ್ಲಿರುವ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಸಹ ಪಾಲ್ಗೊಂಡಿದ್ದರು. ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಕೆ. ಮಿಶ್ರಾರವರು, ಮಾಹಿತಿ ಹಕ್ಕು ಅಧಿನಿಯಮವು ನಾಗರಿಕರಿಗೆ ಯಾವರೀತಿ ಸಂಬಂಧಪಟ್ಟಿರುತ್ತದೆ ಹಾಗೂ ಸಾರ್ವಜನಿಕ ಪ್ರಾಧಿಕಾರಗಳ ಹೊಣೆಗಾರಿಕೆಗಳೇನು ಎಂಬುದರ ಬಗ್ಗೆ ಮಾತನಾಡಿದರು. ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿಯವರು, ಅಧಿನಿಯಮದ ಮೇರೆಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಸಾರ್ವಜನಿಕ ಪ್ರಾಧಿಕಾರಗಳ ಹಾಗೂ ಮಾಹಿತಿ ಆಯುಕ್ತರ ಪಾತ್ರಗಳು ಮತ್ತು ಹೊಣೆಗಾರಿಕೆಗಳು ಕುರಿತಂತೆ ಪ್ರಬಂಧ ಮಂಡಿಸಿದರು.

# ಅಧ್ಯಾಯ – III

**ಆಯೋಗವು ಹೊರಡಿಸಿದ ಕೆಲವು ಪ್ರಮುಖ ಆದೇಶಗಳು:**

3.1 ಪ್ರಸಕ್ತ ಅವಲೋಕನ ವರ್ಷಾವಧಿಯಲ್ಲಿ, ಆಯೋಗವು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳು ಅನುಸರಿಸಬೇಕಾದ ಸಾಮಾನ್ಯ ತತ್ವಗಳು, ಮಾರ್ಗಸೂಚಿಗಳು, ಕಾರ್ಯವಿಧಾನಗಳು, ಪದ್ಧತಿಗಳನ್ನು ವಿಧಿಸಿ ಹಲವಾರು ಆದೇಶಗಳನ್ನು ಹೊರಡಿಸಿದೆ.

3.2 ಕೆಲವು ಅಂತಹ ಆದೇಶಗಳನ್ನು ದಾಖಲಿಸಲು ಈ ಅಧ್ಯಾಯದಲ್ಲಿ ಪ್ರಯತ್ನವನ್ನು ಮಾಡಲಾಗಿದೆ.

**ಎ. ಮಾಹಿತಿ ಹಕ್ಕು ಅಧಿನಿಯಮದ 2(ಹೆಚ್) ಪ್ರಕರಣದ ಮೇರೆಗೆ ಸಾರ್ವಜನಿಕ ಪ್ರಾಧಿಕಾರಗಳನ್ನು ನಿರ್ಧರಿಸುವುದರ ಸಂಬಂಧವಾಗಿ ಆಯೋಗದ ಆದೇಶಗಳು:**

3.3 ದೂರುಗಳ ಮತ್ತು ಅಪೀಲುಗಳ ವಿಚಾರಣೆಯ ಸಮಯದಲ್ಲಿ, ಪ್ರತಿವಾದಿ ಸಂಸ್ಥೆಯು ಸಾರ್ವಜನಿಕ ಪ್ರಾಧಿಕಾರವಾಗಿದೆಯೇ ಎಂಬ ಪ್ರಮುಖವಾದ ಪ್ರಶ್ನೆಯು ಪದೇಪದೇ ಉದ್ಭವಿಸುತಿರುತ್ತದೆ. ಈ ಪ್ರಶ್ನೆಯು ವಿಶೇಷವಾಗಿ, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1957ರ ಮೇರೆಗೆ ನೋಂದಾಯಿಸಲ್ಪಟ್ಟಿರುವ ಸಹಕಾರಿ ಸಂಸ್ಥೆಗಳ ಸಂಬಂಧದಲ್ಲಿ ಹಾಗೂ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ನಿಯಂತ್ರಣಕ್ಕೊಳಪಟ್ಟಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಂಬಂಧದಲ್ಲಿ ಉದ್ಭವಿಸಿತ್ತು.

3.4 "ಸಾರ್ವಜನಿಕ ಪ್ರಾಧಿಕಾರ" ಎಂಬ ಪದದ ಅರ್ಥವನ್ನು ಅಧಿನಿಯಮದ 2(ಹೆಚ್) ಪ್ರಕರಣದಲ್ಲಿ ವಿವರಿಸಲಾಗಿದ್ದು, ಈ ಪ್ರಕರಣವನ್ನು ಕೆಳಗೆ ಯಥಾವತ್ತಾಗಿ ನೀಡಲಾಗಿದೆ.

"2(ಹೆಚ್) 'ಸಾರ್ವಜನಿಕ ಪ್ರಾಧಿಕಾರ' ಎಂದರೆ,–

(ಎ) ಸಂವಿಧಾನದ ಮೂಲಕ ಅಥವಾ ಅದರ ಅಡಿಯಲ್ಲಿ

(ಬಿ) ಸಂಸತ್ತಿನಿಂದ ಮಾಡಲಾದ ಯಾವುದೇ ಇತರ ಕಾನೂನಿನ ಮೂಲಕ;

(ಸಿ) ರಾಜ್ಯ ವಿಧಾನಮಂಡಲದಿಂದ ಮಾಡಲಾದ ಯಾವುದೇ ಇತರ ಕಾನೂನಿನ ಮೂಲಕ;

(ಡಿ) ಸಮುಚಿತ ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ಅಥವಾ ಮಾಡಲಾದ ಆದೇಶದ ಮೂಲಕ

–ಸ್ಥಾಪಿತವಾದ ಅಥವಾ ರಚಿತವಾದ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಅಥವಾ ಸ್ವಯಂ ಆಡಳಿತಸಂಸ್ಥೆ ಮತ್ತು ಇದು–

(i) ಸಮುಚಿತ ಸರ್ಕಾರದ ಒಡೆತನಕ್ಕೆ, ನಿಯಂತ್ರಣಕ್ಕೆ ಒಳಪಟ್ಟ ಅಥವಾ ಅಂಥ ಸರ್ಕಾರ ಒದಗಿಸಿದ ನಿಧಿಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಗಣನೀಯ ಪ್ರಮಾಣದ ಹಣಕಾಸು ನೆರವು ಪಡೆದ ಯಾವುದೇ ನಿಕಾಯವನ್ನು;

(ii) ಸಮುಚಿತ ಸರ್ಕಾರ ಒದಗಿಸಿದ ನಿಧಿಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಗಣನೀಯ ಪ್ರಮಾಣದ ಹಣಕಾಸು ನೆರವು ಪಡೆದ ಸರ್ಕಾರೇತರ ಸಂಸ್ಥೆಗಳು ಒಳಗೊಳ್ಳುತ್ತವೆ;"

3.5 ರಾಜ್ಯದಲ್ಲಿರುವ ಸಹಕಾರಿ ಸಂಸ್ಥೆಗಳ ಸಂಬಂಧದಲ್ಲಿ, ಸಹಕಾರಿ ಸಂಘಗಳ ರಿಜಿಸ್ಟ್ರಾರ್, ಕರ್ನಾಟಕ ಇವರು, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1957ರ ಮೇರೆಗೆ ನೋಂದಾಯಿಸಲ್ಪಟ್ಟ ಎಲ್ಲಾ ಸಹಕಾರಿ ಸಮಸ್ಥೆಗಳು ಪ್ರಕರಣ 2(ಹೆಚ್) ಮೇರೆಗೆ ಸಾರ್ವಜನಿಕ ಪ್ರಾಧಿಕಾರಗಳು ಆಗಿರುತ್ತವೆ ಎಂಬುದಾಗಿ ತಿಳಿಸಿರುವ ಮೂಲಕ ಅಧಿಸೂಚನೆ ಸಂ.ಎಡಿಎಂ/ಆರ್‌ಐಎಸಿ/17/2005-06 ದಿನಾಂಕ 22-9-2005ನ್ನು ಹೊರಡಿಸಿದ್ದಾರೆ. ಅಲ್ಲದೆ ಇವರು ಪ್ರಕರಣ 5ರ ಮೇರೆಗೆ ಸಹಕಾರಿ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ ಕಾರ್ಯದರ್ಶಿಯವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ಹಾಗೂ ಮಾಹಿತಿ ಹಕ್ಕು ಅಧಿನಿಯಮದ 19(1)ನೇ ಪ್ರಕರಣದ ಮೇರೆಗೆ ಸಂಬಂಧಪಟ್ಟ ಸಂಸ್ಥೆಗಳ ಚೇರ್ಮನ್/ಅಧ್ಯಕ್ಷರನ್ನು ಪ್ರಥಮ ಅಪೀಲು ಪ್ರಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ.

3.6 ಶಿಕ್ಷಣ ಇಲಾಖೆಯು ಸಹ ಈ ಮುಂದಿನಂತೆ ಅಧಿಸೂಚನೆಗಳನ್ನು ಹೊರಡಿಸಿದೆ:

(i) ಅಧಿಸೂಚನೆ ಸಂ.ಈಡಿ 31 ಎಎವಿ 2005, ದಿನಾಂಕ 23-8-2005

(ii) ಅಧಿಸೂಚನೆ ಸಂ.ಈಡಿ 34 ಎಎವಿ 2005, ದಿನಾಂಕ 17-9-2005

ಮತ್ತು ಈಡಿ 31 ಎಎವಿ 2005, ದಿನಾಂಕ 21-9-2005.

3.7 ಮೇಲೆ (i) ರಲ್ಲಿ ಉಲ್ಲೇಖಿಸಿದ ಅಧಿಸೂಚನೆಯಲ್ಲಿ, ಎಲ್ಲ ಸರ್ಕಾರಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಒಳಗೊಂಡಂತೆ ಪ್ರೌಢಶಾಲೆಗಳನ್ನು ಹಾಗೂ ಸರ್ಕಾರದಿಂದ ಅನುದಾನವನ್ನು ಪಡೆಯುವ ಎಲ್ಲ ಖಾಸಗಿ ಸಂಸ್ಥೆಗಳನ್ನು/ಸಂಘಗಳನ್ನು ಮಾಹಿತಿ ಹಕ್ಕು ಅಧಿನಿಯಮದ 2(ಹೆಚ್) ಪ್ರಕರಣದ ಮೇರೆಗೆ ಸಾರ್ವಜನಿಕ ಪ್ರಾಧಿಕಾರಗಳನ್ನಾಗಿ ಪ್ರಕಟಿಸಲಾಗಿದೆ.

3.8 ತದನಂತರ, ಪ್ರಕರಣ 5ರ ಮೇರೆಗೆ ಈ ಸಂಸ್ಥೆಗಳ ಮುಖ್ಯಸ್ಥರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ ಮತ್ತು ಮಾಹಿತಿ ಹಕ್ಕು ಅಧಿನಿಯಮದ 19(1)ನೇ ಪ್ರಕರಣದ ಮೇರೆಗೆ ತಾಲ್ಲೂಕಿನ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಹಾಗೂ ಶಿಕ್ಷಣ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರನ್ನು ಪ್ರಥಮ ಅಪೀಲು ಪ್ರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

3.9 ಮೇಲೆ (ii) ರಲ್ಲಿ ಉಲ್ಲೇಖಿಸಿದ ಅಧಿಸೂಚನೆಗಳಲ್ಲಿ, ಪಾಲಿಟೆಕ್ನಿಕ್‌ಗಳು, ಇಂಜನಿಯರಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜು ಮುಂತಾದವು ಒಳಗೊಂಡಂತೆ ಎಲ್ಲಾ ಸರ್ಕಾರಿ ಕಾಲೇಜುಗಳನ್ನು ಹಾಗೂ ಸರ್ಕಾರದಿಂದ ಸಹಾಯಾನುದಾನವನ್ನು ಪಡೆಯುವ ಎಲ್ಲ ಖಾಸಗಿ ಸಂಸ್ಥೆಗಳು/ಸಂಘಗಳು ನಡೆಸುವ ಕಾಲೇಜುಗಳು, ತರಬೇತಿ ಕೇಂದ್ರಗಳನ್ನು ಸಾರ್ವಜನಿಕ ಪ್ರಾಧಿಕಾರಗಳನ್ನಾಗಿ ಪ್ರಕಟಿಸಲಾಗಿದೆ.

3.10 ಇದೂ ಅಲ್ಲದೆ, ಪ್ರಕರಣ 5ರ ಮೇರೆಗೆ ಈ ಸಂಸ್ಥೆಗಳ ಮುಖ್ಯಸ್ಥರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ ಹಾಗೂ ಮಾಹಿತಿ ಹಕ್ಕು ಅಧಿನಿಯಮದ 19(1)ನೇ ಪ್ರಕರಣದ ಮೇರೆಗೆ ಕಾಲೇಜು ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರನ್ನು ಪ್ರಥಮ ಅಪೀಲು ಪ್ರಾಧಿಕಾರಿಗಳನ್ನಾಗಿ ನೇಮಕಮಾಡಲಾಗಿದೆ.

3.11 ಈ ಅಧಿಸೂಚನೆಗಳನ್ನು ಹೊರಡಿಸಲಾಗಿದ್ದರೂ, ಅನೇಕ ಸಹಕಾರಿ ಸಂಘಗಳು ಮತ್ತು ಶಿಕ್ಷಣ ಸಂಸ್ಥೆಗಳು ತಾವು ಸಾರ್ವಜನಿಕ ಪ್ರಾಧಿಕಾರಗಳು ಅಲ್ಲವೆಂದು, ಅವರಿಗೆ ಅಧಿನಿಯಮವು ಅನ್ವಯಿಸದಿದ್ದು ಇದರಿಂದಾಗಿ ಅವರು ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಯಾವುದೇ ಮಾಹಿತಿಯನ್ನು ಒದಗಿಸುವ ಅವಶ್ಯಕತೆ ಇಲ್ಲವೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಕೆಲವು ಅಂಥ ಸಂಘಗಳು ಮತ್ತು ಶಿಕ್ಷಣ ಸಂಸ್ಥೆಗಳು ಸರ್ಕಾರದಿಂದ ಗಣನೀಯ ಪ್ರಮಾಣದ ಹಣಕಾಸು ನೆರವನ್ನು ಪಡೆಯುತ್ತಿದ್ದರೂ ಅವರು ಇನ್ನೂ ತಾವು ಸಾರ್ವಜನಿಕ ಪ್ರಾಧಿಕಾರಗಳು ಅಲ್ಲವೆಂದು ಮಾಹಿತಿ ಹಕ್ಕು ಅಧಿನಿಯಮವು ಅವರಿಗೆ ಅನ್ವಯಿಸುವುದಿಲ್ಲವೆಂದು ಹೇಳುತ್ತಾ ಮಾಹಿತಿಯನ್ನು ಒದಗಿಸಲು ನಿರಾಕರಿಸುತ್ತಿದ್ದಾರೆ/ತಿರಸ್ಕರಿಸುತ್ತಿದ್ದಾರೆ.

3.12 ಆಯೋಗವು ತನ್ನ ಆದೇಶಗಳಲ್ಲಿ, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಮೇರೆಗೆ ನೋಂದಾಯಿಸಲ್ಪಟ್ಟ ಸಹಕಾರಿ ಸಂಘಗಳು ಸಾರ್ವಜನಿಕ ಪ್ರಾಧಿಕಾರಗಳಾಗಿರುತ್ತವೆ ಎಂಬುದಾಗಿ ತಿಳಿಸಿದೆ.

3.13 ಅಲ್ಲದೆ, ಸರ್ಕಾರದಿಂದ ಸಹಾಯಾನುದಾನವನ್ನು ಪಡೆಯುವ ಸಂಘಗಳನ್ನು/ಶಿಕ್ಷಣ ಸಂಸ್ಥೆಗಳನ್ನು, ರಾಜ್ಯ ಸರ್ಕಾರದಿಂದ ಗಣನೀಯ ಪ್ರಮಾಣದಲ್ಲಿ ಹಣಕಾಸು ನೆರವನ್ನು ಪಡೆಯುತ್ತಿರುವ ಸಾರ್ವಜನಿಕ ಪ್ರಾಧಿಕಾರಗಳು ಎಂಬುದಾಗಿ ಪರಿಗಣಿಸಲಾಗಿದೆ.

3.14 ಆಯೋಗದ ಈ ಆದೇಶಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು ವಿಷಯವು ನ್ಯಾಯಾಲಯದ ತೀರ್ಮಾನಕ್ಕೊಳಪಟ್ಟಿರುತ್ತದೆ.

**ಬಿ. ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸುವ ಮತ್ತು ಅಕಾರಾದಿಯಲ್ಲಿ ಅಣಿಗೊಳಿಸುವ, ಸ್ವಪ್ರೇರಣೆ ಘೋಷಣೆಗಳನ್ನು ಪ್ರಕಟಿಸುವ ಹಾಗೂ ದಾಖಲೆ ಮುಂತಾದವುಗಳನ್ನು ನಿರ್ವಹಿಸುವ ಮತ್ತು ವ್ಯವಸ್ಥೆ ನೋಡಿಕೊಳ್ಳುವ ಬಗೆಗಿನ ಆದೇಶಗಳು:**

3.15 ದೂರುಗಳು ಕುರಿತಂತೆ ವಿಚಾರಣೆಯ ಕಾಲದಲ್ಲಿ ಮತ್ತು ಅಪೀಲುಗಳ ಆಲಿಸುವ ಕಾಲದಲ್ಲಿ, ಆಯೋಗವು, ಮಾಹಿತಿ ಹಕ್ಕು ಅಧಿನಿಯಮದ 4(1)(ಎ)ಪ್ರಕರಣದಡಿ ಸೂಚಿಸಿರುವಂತಹ ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸುವ ಮತ್ತು ಅಕಾರಾದಿಯಲ್ಲಿ ಅಣಿಗೊಳಸುವಂತಹ ಹಾಗೂ ಮಾಹಿತಿ ಹಕ್ಕು ಅಧಿನಿಯಮದ 4(1)(ಬಿ) ಪ್ರಕರಣದಡಿ ಅಗತ್ಯಪಡಿಸಿರುವಂತಹ ಸ್ವಪ್ರೇರಣೆ ಘೋಷಣೆಯನ್ನು ಪ್ರಕಟಿಸುವಂತಹ ಈ ಎರಡೂ ಶಾಸನಬದ್ಧ ಕಾರ್ಯಗಳನ್ನು 12ನೇ ಅಕ್ಟೋಬರ್, 2005ರ ಒಳಗೆ ಪೂರೈಸಬೇಕೆಂದು ಅಗತ್ಯಪಡಿಸಲಾಗಿದ್ದರೂ, ಈ ಕಾರ್ಯವನ್ನು ಅನೇಕ ಸಾರ್ವಜನಿಕ ಪ್ರಾಧಿಕಾರಗಳು ಕೈಗೊಂಡಿರುವುದಿಲ್ಲ ಎಂಬುದನ್ನು ಗಮನಿಸಿದೆ. ಅಂಥ ಪ್ರಕರಣಗಳಲ್ಲಿ, ಆಯೋಗವು, ಅಧಿನಿಯಮದ 19(8)ನೇ ಪ್ರಕರಣದಡಿ ನಿಹಿತವಾದ ತನ್ನ ಅಧಿಕಾರವನ್ನು ಚಲಾಯಿಸಿ, ದಾಖಲೆಗಳ ಪಟ್ಟಿಯ ಗಣಕೀಕರಣ ಮತ್ತು ಅವುಗಳನ್ನು ತಮ್ಮತಮ್ಮ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸುವುದು ಒಳಗೊಂಡಂತೆ ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸುವ ಮತ್ತು ಅಕಾರಾದಿಯಲ್ಲಿ ಅಣಿಗೊಳಸುವ ಪ್ರಕ್ರಿಯೆಯನ್ನು ಸಂಪೂರ್ಣಗೊಳಸುವಂತೆ ಸಾರ್ವಜನಿಕ ಪ್ರಾಧಿಕಾರಗಳಗೆ ನಿರ್ದೇಶಿಸಿದೆ.

3.16 ಹೇಳಲಾದ ಕಚೇರಿ ಕಾರ್ಯವಿಧಾನದ ಪ್ರಕಾರ ದಾಖಲೆಗಳ ಮತ್ತು ದಾಖಲೆ ಕೊಠಡಿಗಳ ನಿರ್ವಹಣೆ ಮತ್ತು ವ್ಯವಸ್ಥೆಯನ್ನು ಕೈಗೊಂಡಿರುವುದಿಲ್ಲ ಎಂಬುದನ್ನು ಸಹ ಆಯೋಗವು ಗಮನಿಸಿದೆ. ಆದ್ದರಿಂದ ತನ್ನ ಹಲವು ನಿರ್ಣಯಗಳಲ್ಲಿ ಆಯೋಗವು ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರಗಳಗೆ ಆದೇಶಿಸಿದೆ.

**ಸಿ. ಮಾಹಿತಿ ಹಕ್ಕು ಅಧಿನಿಯಮದ 8 ಮತ್ತು 11ನೇ ಪ್ರಕರಣಗಳಡಿಯ ವಿನಾಯಿತಿಗಳಗೆ ಸಂಬಂಧಿಸಿದ ಆದೇಶಗಳು:**

3.17 ಪ್ರಕರಣ 8(1) ರಲ್ಲಿ ಕೆಲವು ಬಗೆಯ ಮಾಹಿತಿಯನ್ನು ಬಹಿರಂಗಗೊಳಸುವುದರಿಂದ ವಿನಾಯಿತಿಗಾಗಿ ಉಪಬಂಧವನ್ನು ಕಲ್ಪಿಸಿದೆ.

3.18 ಆದರೆ, ಹಲವಾರು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಪ್ರಥಮ ಅಪೀಲು ಪ್ರಾಧಿಕಾರಗಳು, ಸರ್ಕಾರಿ ನೌಕರರ ಸೇವಾ ವಿವರಗಳು, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಿವರಪಟ್ಟಿಗಳಂಥ ಕೋರಲಾದ ಮಾಹಿತಿ ಹಾಗೂ ಕಲ್ಯಾಣ ಯೋಜನೆಗಳು ಮತ್ತು ಸಹಾಯಧನ ಯೋಜನೆಗಳಡಿ ಲಭ್ಯವಿರುವ ಪ್ರಯೋಜನ, ವಿಚಾರಣಾ ವರದಿ ಮುಂತಾದವುಗಳ ಸಂಬಂಧದಲ್ಲಿನ ಮಾಹಿತಿಯು ಈ ವಿನಾಯಿತಿಗಳಡಿ ಬರುತ್ತದೆ ಎಂಬ ಆಧಾರದ ಮೇಲೆ ಮಾಹಿತಿಗಾಗಿನ ಕೋರಿಕೆಗಳನ್ನು ತಪ್ಪಾಗಿ ಅರ್ಥೈಸಿ ತಿರಸ್ಕರಿಸಿದ್ದಾರೆ. ಆಯೋಗವು ಈ ಚರ್ಚೆಯ ವಿಷಯಗಳನ್ನು ವಿಶ್ಲೇಷಿಸಿದ್ದು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳು ಕೆಲವು ಷರತ್ತುಗಳಗೊಳಪಟ್ಟು ಮಾಹಿತಿಯನ್ನು ಒದಗಿಸುವಂತೆ ನಿರ್ದೇಶಿಸಿದೆ.

**ಡಿ. ಮಾಹಿತಿ ಹಕ್ಕು ಅಧಿನಿಯಮದ 19(8)(ಬಿ) ಪ್ರಕರಣದಡಿ ಫಿರ್ಯಾದುದಾರಿಗೆ ಉಂಟಾದ ಹಾನಿಯ ಕಾರಣ ಐತೀರ್ಮ ನೀಡಲಾದ ವೆಚ್ಚ/ನಷ್ಟಪರಿಹಾರಕ್ಕೆ ಸಂಬಂಧಿಸಿದ ಆದೇಶಗಳು:**

3.19 ದೂರುಗಳ/ಅಪೀಲುಗಳ ವಿಚಾರಣೆ ಕಾಲದಲ್ಲಿ, ಅನೇಕ ಪ್ರತಿವಾದಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಯಾವುದೇ ಸಮರ್ಥನೀಯ ಕಾರಣ ನೀಡದೆ ವಿಚಾರಣೆಗಳನ್ನು ಮುಂದೂಡುವಂತೆ ಕೋರುತ್ತಾರೆ. ಕೆಲವು ವೇಳೆ ಅವರು ಗೈರುಹಾಜರಾಗುವುದರಿಂದ ಫಿರ್ಯಾದುದಾರರಿಗೆ ಅನಾನುಕೂಲ ಉಂಟಾಗುತ್ತದೆ ಹಾಗೂ ಇದರ ಪರಿಣಾಮವಾಗಿ ಪ್ರಕರಣಗಳು ಮುಂದೂಡಲ್ಪಡುತ್ತವೆ. ಅಂಥ ಸೂಕ್ತ ಪ್ರಕರಣಗಳಲ್ಲಿ, ಆಯೋಗವು ಮೂಂದೂಡಲ್ಪಟ್ಟ ಪ್ರಕರಣದ ವೆಚ್ಚವನ್ನು ಸಾರ್ವಜನಿಕ ಪ್ರಾಧಿಕಾರದಿಂದ ಅಥವಾ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಖುದ್ದಾಗಿ ಸಂದಾಯ ಮಾಡುವಂತೆ ಐತೀರ್ಪು ನೀಡಿದೆ.

3.20 ಕೆಲವು ಇತರ ಪ್ರಕರಣಗಳಲ್ಲಿ, ಪ್ರತಿವಾದಿ ಸಾರ್ವಜನಿಕ ಮಾಹಿತಿ ಅಧಿಕಾರಿಯು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಾಹಿತಿಯನ್ನು ಒದಗಿಸದಿದ್ದು, ಇದರಿಂದಾಗಿ ಫಿರ್ಯಾದುದಾರನಿಗೆ ನಷ್ಟ/ಹಾನಿ ಉಂಟಾಗಿದೆ. ಅಂಥ ಪ್ರಕರಣಗಳಲ್ಲಿ ಆಯೋಗವು, ಅರ್ಜಿದಾರನಿಗೆ ಉಂಟಾದ ಹಾನಿಗಾಗಿ ಮತ್ತು ಆತನು ಮಾಡಿರುವ ತಪ್ಪಿಸಬಲ್ಲ ವೆಚ್ಚಕ್ಕಾಗಿಯೂ ಸಹ ಸಾರ್ವಜನಿಕ ಪ್ರಾಧಿಕಾರವು ನಷ್ಟಪರಿಹಾರವನ್ನು ಸಂದಾಯ ಮಾಡುವಂತೆ ಆದೇಶಿಸಿದೆ.

ಅಂಥ ಕೆಲವು ಪ್ರಕರಣಗಳನ್ನು ಈ ಮುಂದಿನ ಕೋಷ್ಟಕದಲ್ಲಿ ವಿವರಿಸಲಾಗಿದೆ:

| ಕ್ರ. ಸಂ. | ಪ್ರಕರಣದ ಸಂಖ್ಯೆ ಮತ್ತು ಆಜ್ಞೆಯ ದಿನಾಂಕ | ಪಕ್ಷಕಾರರು | ಆದೇಶದ ಸಾರಾಂಶ | ವೆಚ್ಚ / ನಷ್ಟ ಪರಿಹಾರ (ರೂ.ಗಳಲ್ಲಿ) | ಷರಾ |
|---|---|---|---|---|---|
| 1 | 2 | 3 | 4 | 5 | 6 |
